
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸಂಪುಟ : 37 ಸಂಚಿಕೆ : 6 ಕನ್ಯಾ–ತುಲಾ ಕಲಿಯುಗಾಬ್ದ 5117 1–11–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


### 90 ವರ್ಷ ಪೂರೈಸಿದ ಆರೆಸ್ಸೆಸ್ * ಸರಸಂಘಚಾಲಕ ಮೋಹನ್ ಭಾಗವತ್ ವಿಜಯದಶಮಿ ಭಾಷಣ

# ಪ್ರಗತಿ ಪಥದತ್ತ ವಿಶ್ವಾಸದ ಹೆಜ್ಜೆಗಳು

ಮೊನ್ನೆ ಅಕ್ಟೋಬರ್ 22ರಂದು ನಾಗಪುರದ ರೇಶಿಮ್‌ಬಾಗ್ ಮೈದಾನದಲ್ಲಿ ನಡೆದ ವಿಜಯದಶಮಿ ಉತ್ಸವದ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ತನ್ನ ಸ್ಥಾಪನೆಯ 90ನೇ ವರ್ಷ ಪೂರೈಸಿತು. ಈ ವೇಳೆ ಸ್ವಯಂಸೇವಕರನ್ನುದ್ದೇಶಿಸಿ ಮಾತನಾಡಿದ ಸರಸಂಘಚಾಲಕ ಮೋಹನ್ ಭಾಗವತ್ ದೇಶವನ್ನು ಪ್ರಭಾವಿಸುವ ಅನೇಕ ಆಗು–ಹೋಗುಗಳ ಕುರಿತು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಅವರ ವಿಜಯದಶಮಿ ಭಾಷಣದ ಸಾರರೂಪ ಇಲ್ಲಿದೆ.



ಈ ಬಾರಿಯ ವಿಜಯದಶಮಿಯು ಹಲವಾರು ವಿಶೇಷ ಸಂದರ್ಭಗಳನ್ನು ಜತೆಗೂಡಿ ತಂದಿದೆ. ಸಮರಸತೆಯ ಹರಿಕಾರ ಭಾರತರತ್ನ ಡಾ॥ ಅಂಬೇಡ್ಕರ್‌ರ 125ನೇ ಜನ್ಮ ವರ್ಷ, ಏಕಾತ್ಮ ಮಾನವದರ್ಶನದ ವಿಚಾರಕುಂಭ ತೆರೆದಿಟ್ಟ ಪಂಡಿತ್ ದೀನದಯಾಳ್ ಉಪಾಧ್ಯಾಯರ ಜನ್ಮಶತಾಬ್ದಿ ವರ್ಷ, ದಕ್ಷಿಣ ಭಾರತದಲ್ಲಿ ಒಂದೊಮ್ಮೆ ದಕ್ಷ ರಾಜ್ಯಭಾರದ ಮೂಲಕ ಪ್ರಸಿದ್ಧರಾಗಿದ್ದ ರಾಜರಾಜೇಶ್ವರ ರಾಜೇಂದ್ರ ಚೋಳರ ಪಟ್ಟಾಭಿಷೇಕದ 1000ನೇ ವರ್ಷಾಚರಣೆ, ಭಕ್ತಿಮಾರ್ಗದ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡಿದ ಶ್ರೀ ರಾಮಾನುಜಾಚಾರ್ಯರ 1000ನೇ ಜಯಂತಿಯ ವರ್ಷ, ಜಮ್ಮು–ಕಾಶ್ಮೀರದ ಶೈವ ತತ್ತ್ವಜ್ಞಾನಿ ಆಚಾರ್ಯ ಅಭಿನವ ಗುಪ್ತರ ಸಾವಿರನೇ ಜನ್ಮವರ್ಷ, ಮಾನವ ಜೀವನದ ಸರ್ವಸಂದೇಶದ ಸಾರ ಮೈಗೂಡಿಸಿರುವ ಭಗವದ್ಗೀತೆಯ 5151ನೇ ವರ್ಷಾಚರಣೆ, ಅದೇ ರೀತಿ ಆದರ್ಶ ಮಾನವತೆಯ ಸಾಕಾರಮೂರ್ತಿ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಹಾಗೂ ದಾರ್ಶನಿಕ ಪೂಜ್ಯ ದಯಾನಂದ ಸರಸ್ವತೀಯವರ ಅಗಲಿಕೆ – ಇವೆಲ್ಲವೂ ಈ ಸಂದರ್ಭದಲ್ಲಿ ಸಾಮಾಜಿಕವಾಗಿ ಸಕ್ರಿಯವಾಗಿರುವ ನಮಗೆ ನೆನಪಾಗುವ ಸಂಗತಿಗಳು.

## ಆಧುನಿಕತೆಗೆ ಹೊಂದಿಕೊಳ್ಳುವ ಮಾನಸಿಕತೆ

ಸ್ವಾವಲಂಬಿ, ಸದೃಢ, ಸಮೃದ್ಧ ಮತ್ತು ಸುರಕ್ಷಭಾರತದ ಪುನರುಜ್ಜೀವನವು ಸಮಾನತಾವಾದಿ, ಸುಸಂಘಟಿತ ಮತ್ತು ಜಾಗೃತ ಸಮಾಜದಿಂದಷ್ಟೇ ಸಾಧ್ಯ. ಅಷ್ಟು ಮಾತ್ರವಲ್ಲ, ಅಂತಹ ಸಮಾಜದ ದೃಢ ನಿರ್ಧಾರವು ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯ ನೀತಿಗಳಲ್ಲಿ ಮತ್ತು ವ್ಯವಸ್ಥೆಯನ್ನು ಮುನ್ನಡೆಸುವ ಸಾಂವಿಧಾನಿಕ ಪ್ರಾಧಿಕಾರಗಳಲ್ಲಿ ಪ್ರತಿಫಲಿತವಾಗುತ್ತದೆ. ಸ್ವಾರ್ಥ ಮತ್ತು ಭೇದ–ಭಾವ ಮುಕ್ತ ಸಮಾಜದ ಚುರುಕಿನ ಸ್ಪಷ್ಟ, ನಿಖರ ನೀತಿಗಳು ಹಾಗೂ ವಿವೇಚನೆ ದೇಶದ ಅದೃಷ್ಟವನ್ನು ಬದಲಾಯಿಸಲು ಅಗತ್ಯವಾಗಿದೆ. ಆದ್ದರಿಂದ ಅವೆರಡೂ ಪರಸ್ಪರ ಪೂರಕವಾಗಿರಬೇಕು. ಈ ದಿಕ್ಕಿನಲ್ಲಿ ನಾವು ಅತ್ಯಂತ ಆಶಾದಾಯಕ ಮತ್ತು ಸಮಾಧಾನಕರ ನೋಟವನ್ನು ಕಾಣುತ್ತಿದ್ದೇವೆ.

ನೆರೆ ರಾಷ್ಟ್ರಗಳ ಹಾಗೂ ಜಗತ್ತಿನ ಎಲ್ಲಾ ಅಭಿವೃದ್ಧಿಶೀಲ ದೇಶಗಳ ನಿರೀಕ್ಷೆಗಳು ಇಂದು ಭಾರತದ ಕುರಿತಾಗಿ ಕೇಂದ್ರೀಕೃತಗೊಂಡಿದೆ. ಭಾರತದ ನಾಯಕತ್ವದೆಡೆ ಆಸೆಗಣ್ಣುಗಳಿಂದ ನೋಡುತ್ತಿವೆ. ಏಳು ಬೀಳುಗಳ ತನ್ನ ಇತಿಹಾಸದುದ್ದಕೂ ಭಾರತ ಯಾವಾಗಲೂ ಇಡೀ ಜಗತ್ತನ್ನು ಸ್ವತಃ ತನ್ನದೇ ಕುಟುಂಬ ಎಂಬಂತೆ ನೋಡಿಕೊಂಡು ಬಂದಿದೆ. ರಾಷ್ಟ್ರೀಯ ಹಿತಾಸಕ್ತಿಗಳು ಮತ್ತು ಜಾಗತಿಕ ಹಿತಾಸಕ್ತಿಗಳ ನಡುವೆ ಸಮತೋಲನವನ್ನು ಕಂಡುಕೊಳ್ಳುವ ಸಂಪ್ರದಾಯವನ್ನು ಅನುಸರಿಸುತ್ತಾ ಬಂದಿದೆ. ಇಂದು ನಾವು ಅದೇ ರಾಜತಾಂತ್ರಿಕ ನಿಲುವಿನ ಆಶಾಕಿರಣವನ್ನು ಅನುಭವಿಸುತ್ತಾ ಇದ್ದೇವೆ. ಭಾರತದ ಈ ಸ್ವಾಭಿಮಾನದ ಚಿತ್ರಣ ಈ ನೆಲದ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಅಚ್ಚೊತ್ತಬೇಕಾಗಿದೆ. ಆದ್ದರಿಂದ ನಮ್ಮ ರಾಷ್ಟ್ರೀಯ ಜೀವನದ ಎಲ್ಲಾ ವರ್ಗಗಳನ್ನು ಹೊಸ ಆಲೋಚನೆ ಮತ್ತು ಹೊಸ ದಿಟ್ಟತನದ ಪ್ರಯತ್ನಗಳೊಂದಿಗೆ ಕ್ರಿಯಾಶೀಲಗೊಳಿಸಬೇಕಾದುದು ಮಹತ್ತ್ವದ್ದಾಗಿದೆ. ಆದ್ದರಿಂದ ಆಧುನಿಕ ಕಾಲದೊಂದಿಗೆ ಹೊಂದಿಕೊಳ್ಳುವ ನೀತಿ ಮತ್ತು ವ್ಯವಸ್ಥೆಯನ್ನು ಅಂಗೀಕರಿಸುವ ಸಾಮರ್ಥ್ಯವಿರುವ, ಅದೇ ಹೊತ್ತಿಗೆ ಚಿರಂತನ ಸತ್ಯದ ತಳಹದಿಗಳ ಮೇಲೆ ಸಮಾಜದ ಹೊಸ ಚಿತ್ರಣವನ್ನು ಸೃಷ್ಟಿಸುವುದು ಸದ್ಯದ ಅಗತ್ಯವಾಗಿದೆ.

## ಸಮನ್ವಯದಿಂದ ಸಹಬಾಳ್ವೆ

ಭಾರತೀಯ ಅಸ್ಮಿತೆಯನ್ನು ಆಧಾರವಾಗಿಟ್ಟುಕೊಂಡು ನಾವು ಜಗತ್ತಿನ ಇತರ ದೇಶಗಳಿಂದ ಉತ್ತಮವಾದುದು, ಸತ್ಯವಾದುದು ಮತ್ತು ನ್ಯಾಯಯುತವಾದುದು ಯಾವುದಿದೆಯೋ ಅದನ್ನು ಅಂಗೀಕರಿಸಬೇಕು. ಮತ್ತು ನಮ್ಮ ದೇಶಕ್ಕಾಗಿ ಸ್ವತಂತ್ರ ಆಧುನಿಕ ಮಾರ್ಗಸೂಚಿಯೊಂದನ್ನು ಸೃಷ್ಟಿಸಿಕೊಳ್ಳಬೇಕು. ಪ್ರಾಜ್ಞರ ಚಿಂತನೆಗಳು ಮತ್ತು ಕೆಲಸಗಳು ಸರಕಾರದ ಆಡಳಿತ ಮತ್ತು ನೀತಿಗಳನ್ನು ಅದಕ್ಕನುಗುಣವಾಗಿ ಪರಿವರ್ತಿಸಿಕೊಳ್ಳಬೇಕು. ಸಮನ್ವಯ (Synergy) ಇಲ್ಲದೆ ಸ್ವಾವಲಂಬಿ, ಬಲಿಷ್ಠ ಮತ್ತು ಸಮೃದ್ಧ ಭಾರತನ್ನು ರೂಪಿಸಲು ಸಾಧ್ಯವಿಲ್ಲ. ವಿಶ್ವದಲ್ಲಿ ಶತಮಾನಗಳಿಂದ ಸಾಗಿಬಂದ ಚಿಂತನಾ ಪ್ರಕ್ರಿಯೆಗಳು ಮತ್ತು ಸಾಮಾಜಿಕ ತತ್ತ್ವಗಳಲ್ಲಿನ ಕೆಲ ನ್ಯೂನತೆಗಳು ಇದೀಗ ವೈಜ್ಞಾನಿಕವಾಗಿ ಋಜುವಾಗಿದೆ. ಇವುಗಳ ದುಷ್ಪರಿಣಾಮಗಳ ಬಗ್ಗೆ ವಿಮರ್ಶಿಸಬೇಕಾದ ಅಗತ್ಯವಿದೆ.

## ಹಿಂದುತ್ವ – ಈ ನೆಲದ ಮೂಲಮಂತ್ರ

ವಿವಿಧತೆಯೇ ನಮ್ಮ ಸಮಾಜದ ಮೂಲಗುಣ. ಆದರೆ ಆ ವೈವಿಧ್ಯದಲ್ಲೂ ಏಕತೆಯನ್ನು ಸಾಧಿಸಲು ಹಿಂದೂ ಸಂಸ್ಕೃತಿ, ನಮ್ಮ ಪೂರ್ವಜರು, ನಮ್ಮ ಮಾತೃಭೂಮಿ ಎಂಬ 3 ಸಾರ್ವಕಾಲಿಕ ಅಂಶಗಳ ಅಗತ್ಯ ಇದೆ. ಈ ಮೂರು ಅಂಶಗಳ ಕುರಿತಾಗಿ ನಮ್ಮ ಜ್ಞಾನ–ಶ್ರದ್ಧೆ ಸದಾ ಜಾಗೃತವಾಗಿರಬೇಕು. ಈ ಮೇಲೆ ಹೇಳಿದ 3 ಅಂಶಗಳಿಂದಲೇ ಒಡಮೂಡಿದ ಮಾನವತೆಯ ಅಭಿವ್ಯಕ್ತಿ, ಜೀವನ ದೃಷ್ಟಿಕೋನ, ಸಮಾಜಮುಖಿ ಚಿಂತನೆಗಳನ್ನೇ 'ಹಿಂದುತ್ವ' ಎಂದು ಕರೆದಿರುವುದು.

ಕಳೆದ 90 ವರ್ಷಗಳಲ್ಲಿ ಹಿಂದೂ ಸಮಾಜದ ಸಂಘಟನೆಯ ಮೂಲಕ ರಾಷ್ಟ್ರದ ಸರ್ವಾಂಗೀಣ ಉನ್ನತಿಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಕಾರ್ಯಪ್ರವೃತ್ತವವಾಗಿದೆ. ಸಾಮಾಜಿಕವಾಗಿ ಸಕ್ರಿಯರಾಗಿ ರಾಷ್ಟ್ರವನ್ನು ಈ ದಿಶೆಯಲ್ಲಿ ಕೊಂಡೊಯ್ಯಲು ಸಿದ್ಧರಾಗಿರುವ, ಸ್ವಯಂಸೇವಕರನ್ನು ರೂಪಿಸುವುದೇ ಸಂಘದ ಕಾರ್ಯ. ಸಂಘದ ಸ್ವಯಂಸೇವಕರಾಗಿ, ಸಮಾಜ ಕಟ್ಟುವ ಕಾಯಕದೊಂದಿಗೆ ಕೈಜೋಡಿಸಿ ಎಂಬುದೇ ವಿಜಯದಶಮಿಯ ಸಂದರ್ಭದಲ್ಲಿ ನನ್ನ ಮನವಿ.

## ಶಿಕ್ಷಣ ಕ್ಷೇತ್ರದಲ್ಲಿ ಬೇಕಿದೆ ಹೊಸ ಪ್ರಯೋಗಗಳು

ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣ ಕ್ಷೇತ್ರದ ಕೊಡುಗೆ ಗಣನೀಯ. ಶಿಕ್ಷಣದ ವ್ಯಾಪಾರೀಕರಣ ತೀವ್ರವಾಗಿ ಏರುಗತಿಯಲ್ಲಿ ಸಾಗಿರುವುದು ಕಳವಳಕಾರಿ ಸಂಗತಿ. ದುಬಾರಿಯಾಗಿರುವ ವಿದ್ಯಾಭ್ಯಾಸದಿಂದಾಗಿ ಶಿಕ್ಷಣದ ಮೂಲ ಉದ್ದೇಶಗಳೇ ಮೂಲೆಗುಂಪಾಗಿದೆ ಅನ್ನುವ ಭಾವನೆ ಸಮಾಜದಲ್ಲಿ ಒಡಮೂಡಿದೆ. ವ್ಯಕ್ತಿಯ ಸಮಗ್ರ ವಿಕಾಸಕ್ಕೆ ಪೂರಕವಾಗುವ ನೂತನ ಪ್ರಯೋಗಗಳು ಶಿಕ್ಷಣ ಕ್ಷೇತ್ರದಲ್ಲಿ ಅನಿವಾರ್ಯ ಎನಿಸಿದೆ. ಈ ಕುರಿತು ಶಿಕ್ಷಣ ತಜ್ಞರು, ಶಿಕ್ಷಣ ಸಂಸ್ಥೆಗಳು, ಶಿಕ್ಷಣ ಕ್ಷೇತ್ರದಲ್ಲಿನ ಸಾಮಾಜಿಕ ಸಂಘಟನೆಗಳು ಪರಸ್ಪರ ಸಮನ್ವಯದಿಂದ ಚರ್ಚಿಸಿ ಆರೋಗ್ಯಪೂರ್ಣ ಶಿಕ್ಷಣ ವ್ಯವಸ್ಥೆಗೆ ಬೇಕಾದ ಪಠ್ಯಕ್ರಮ, ಶುಲ್ಕಶ್ರೇಣಿ, ಶಿಕ್ಷಣದಲ್ಲಿನ ನಿರ್ವಹಣಾ ಕೌಶಲ್ಯಗಳು – ಇತ್ಯಾದಿಗಳ ಕುರಿತು ಸಮಗ್ರ ನೀತಿಯೊಂದನ್ನು ರೂಪಿಸಬೇಕಾಗಿದೆ. ಸರಕಾರೀ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾಭ್ಯಾಸದ ಗುಣಮಟ್ಟ ಹಾಗೂ ಶಿಕ್ಷಕರ ಗುಣಮಟ್ಟವನ್ನು ಹೆಚ್ಚಿಸಲು ಸರಕಾರ ವಿವಿಧ ಯೋಜನೆಗಳನ್ನು ಶೀಘ್ರವಾಗಿ ಕೈಗೊಳ್ಳಬೇಕಿದೆ.

## ಗರಿಗೆದರಿದ ನಿರೀಕ್ಷೆ

ಒಂದೆರಡು ವರ್ಷಗಳ ಹಿಂದೆ ತಲೆದೋರಿದ್ದ ನಿರಾಸೆಯ ಮತ್ತು ನಂಬಿಕೆಯೇ ಕಳೆದುಹೋಗಿದ್ದಂತಹ ವಾತಾವರಣ ಇಂದು ಅದೃಶ್ಯವಾಗಿದೆ. ನಿರೀಕ್ಷೆಗಳ ವಾತಾವರಣ ತಲೆದೋರಿದೆ. ಅಂತಹ ನಿರೀಕ್ಷೆಗಳು ಈಡೇರುವವೆಂಬ ಆಶಾಭಾವನೆ ಮೂಡಿದೆ. ಈ ಧನಾತ್ಮಕ ಭಾವನೆಗಳು ಕಟ್ಟಕಡೆಯ ವ್ಯಕ್ತಿಯನ್ನು ತಲಪುವುದನ್ನು ಖಾತ್ರಿ ಪಡಿಸಿಕೊಳ್ಳಬೇಕಾಗಿದೆ. ಸ್ವತಃ ಆತನ ವೈಯಕ್ತಿಕ ಜೀವನ ಹಾಗೂ ರಾಷ್ಟ್ರೀಯ ಜೀವನ ಉಜ್ವಲ ಭವಿಷ್ಯದಲ್ಲಿ ಆತನ ನಂಬಿಕೆ ಬೆಳೆಯಬೇಕು.

ಕಳೆದೆರಡು ವರ್ಷಗಳಲ್ಲಿ ಜಗತ್ತಿನಲ್ಲಿ ಭಾರತದ ಘನತೆ ಗೌರವ ಅನೇಕಪಟ್ಟು ಹೆಚ್ಚಾಗಿದೆ ಎಂಬುದು ಎಲ್ಲರಿಗೂ ವೇದ್ಯವಾಗುತ್ತಿದೆ. ಭಾರತದ ರಾಷ್ಟ್ರೀಯ ಹಿತದೃಷ್ಟಿಯಿಂದ ನೆರೆರಾಷ್ಟ್ರಗಳೊಂದಿಗೆ ದ್ವಿಪಕ್ಷೀಯ ಸಂಬಂಧಗಳನ್ನು ಉತ್ತಮಪಡಿಸಲು ಅನೇಕ ಪೂರ್ವನಿಯಾಮಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅವು ಯಶಸ್ವಿ ಫಲಿತಾಂಶಗಳನ್ನು (ಪುಟ 2ಕ್ಕೆ...)

## ವಿಕಸಿತಗೊಳ್ಳಲಿ ಅಭ್ಯುದಯದ ನೀಲನಕ್ಷೆ

**ಕೇಂದ್ರ ಸರಕಾರದ ಜನಪರ ಯೋಜನೆಗಳು ದೇಶದ ಅಭಿವೃದ್ಧಿಯ ಪಥದಲ್ಲಿ ಮಹತ್ವದ ಕೊಡುಗೆಗಳನ್ನು ನೀಡುತ್ತಿರುವುದು ಶ್ಲಾಘನೀಯ. 'ನೀತಿ ಆಯೋಗ'ದ ಮೂಲಕ ಆರ್ಥಿಕ ಅಭ್ಯುದಯದ ನೀಲನಕ್ಷೆಗಳು ಬಲಗೊಳ್ಳುತ್ತಿವೆ. ಜನಸಾಮಾನ್ಯರ ಆರ್ಥಿಕ ಸ್ಥಿತಿಯನ್ನು ಉತ್ತೇಜಿಸುವ ಹಲವಾರು ಯೋಜನೆಗಳಾದ ಮುದ್ರಾ ಬ್ಯಾಂಕ್, ಜನ–ಧನ ಯೋಜನೆ ಇತ್ಯಾದಿ ಹೊಸ ಪ್ರಯೋಗಗಳು ಭರವಸೆ ಮೂಡಿಸಿದೆ. ಸ್ವಯಂಪ್ರೇರಣೆಯಿಂದ ಗ್ಯಾಸ್ ಸಬ್ಸಿಡಿ ತ್ಯಜಿಸಲು ನೀಡಿದ ಕರೆಗೆ ಹಾಗೂ ಸ್ವಚ್ಛ ಭಾರತ, ಕೌಶಲ್ಯ ಅಭಿವೃದ್ಧಿ ಯೋಜನೆಗಳಿಗೆ ಸಾರ್ವಜನಿಕ ಸ್ಪಂದನೆ ಗಣನೀಯವಾಗಿದೆ. ಈ ಎಲ್ಲ ಯೋಜನೆಗಳ ಅನುಷ್ಠಾನ ಯಾವ ರೀತಿ ಆಗುತ್ತಿದೆ ಎಂಬುದನ್ನು ಗುಣಾತ್ಮಕ (Qualitative) ಮತ್ತು ಸಂಖ್ಯಾತ್ಮಕ (Quantitative) ವಾಗಿ ಅಧ್ಯಯನ ಮಾಡಬೇಕು. ಸರ್ಕಾರೀ ಯೋಜನೆಗಳ ಸಮರ್ಪಕ ಹಾಗೂ ಶೀಘ್ರ ಅನುಷ್ಠಾನಕ್ಕೆ ಅಧ್ಯಯನ ಪೂರಕವಾಗಬಲ್ಲದು. ಮುಂದಿನ 50 ವರ್ಷಗಳಲ್ಲಿ ನಮ್ಮ ದೇಶದ ಒಟ್ಟು ಆರ್ಥಿಕ ಸ್ಥಿತಿ–ಗತಿ ಯಾವ ರೀತಿ ಸುಧಾರಿಸಬಲ್ಲದು? ಮುಂದಿನ 50 ವರ್ಷಗಳಲ್ಲಿ ಮಾನವ ಸಂಪನ್ಮೂಲ ಅಥವಾ ಜನಸಂಖ್ಯಾ ಪ್ರಮಾಣ ಎಷ್ಟು ಹೆಚ್ಚಾಗಬಲ್ಲದು ಎಂಬುದರ ಕುರಿತು ಯೋಚಿಸಬೇಕಾಗಿದೆ. ಈ ಏರಿದ ಜನಸಂಖ್ಯೆಗೆ ಅಗತ್ಯವಾದಷ್ಟು ಉದ್ಯೋಗ, ಆರೋಗ್ಯ, ಆಹಾರ, ಸಾಮಾಜಿಕ ಸ್ವಾಭಿಮಾನ, ಮಹಿಳಾ ಸಬಲೀಕರಣದ ವ್ಯವಸ್ಥೆಗಳು, ಸಾಮಾಜಿಕ ಅವಕಾಶಗಳು, ನಮ್ಮ ಪರಿಸರ ಸಂಪನ್ಮೂಲ – ಇವೆಲ್ಲದರ ಕುರಿತು ನಾವು ಈಗಿನಿಂದಲೇ ಚಿಂತನೆ ನಡೆಸಿ ಕಾರ್ಯಪ್ರವೃತ್ತರಾಗಬೇಕಾಗಿದೆ. ಕಳೆದೆರಡು ಜನಗಣತಿಯ ವರದಿಯನ್ನು ನೋಡಿದಾಗ ಜನಸಂಖ್ಯಾ ಪ್ರಗತಿಯಲ್ಲಿ ಒಂದಷ್ಟು ಅಸಮತೋಲನ ಕಂಡುಬಂದಿದ್ದರ ಹಿನ್ನೆಲೆಯಲ್ಲಿ ನಮ್ಮ ದೇಶದ ಜನಸಂಖ್ಯಾ ನೀತಿಗಳು (Population Policy) ವಿಮರ್ಶೆಗೆ ಒಳಪಡಬೇಕಾಗಿದೆ. ಸರಕಾರ ನೀತಿ ರೂಪಿಸಿದರೆ ಮಾತ್ರ ಸಾಲದು, ಅದನ್ನು ಪಾಲಿಸುವ ನಿಷ್ಠೆಯನ್ನು ಸಮಾಜದ ಎಲ್ಲಾ ವರ್ಗದ ಜನರು ತೋರಬೇಕಾಗಿದೆ.**

# ಕೆನಡಾ ಸಂಸತ್‌ಗೆ 19 ಅನಿವಾಸಿ ಭಾರತೀಯರ ಆಯ್ಕೆ

ಕೆನಡಾ ಸಂಸತ್ ಚುನಾವಣೆಯಲ್ಲಿ ಭಾರತೀಯ ಮೂಲದ 19 ಮಂದಿ ಸಂಸದರಾಗಿ ಆಯ್ಕೆಯಾಗಿದ್ದಾರೆ. ಸುದೀರ್ಘ ಕಾಲದಿಂದ ಸಂಸತ್ ಸದಸ್ಯರಾಗಿರುವ ಭಾರತೀಯ ಮೂಲದ ದೀಪಕ್ ಒಬ್ರಾಯ್ ಸತತ 7ನೇ ಬಾರಿಗೆ ಕಲ್ಗರಿ ಫಾರೆಸ್ಟ್ ಲಾನ್ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಕಳೆದ 4 ಬಾರಿ ಸಂಸತ್ ಸದಸ್ಯೆಯಾಗಿದ್ದ ನೀನಾ ಗ್ರೆವಾಲ್ ಈ ಬಾರಿ ಸೋಲು ಕಂಡಿದ್ದಾರೆ. 2011ರ ಚುನಾವಣೆಯಲ್ಲಿ ಕನ್ಸರ್ವೆಟಿವ್ ಪಕ್ಷದಿಂದ ಹೆಚ್ಚಿನ ಸಂಖ್ಯೆಯ ಅನಿವಾಸಿ ಭಾರತೀಯರು ಕೆನಡಾ ಸಂಸತ್‌ಗೆ ಆಯ್ಕೆಯಾಗಿದ್ದರು. ಆದರೆ ಈ ಬಾರಿ ಪ್ರಧಾನಿಯಾಗಿ ಆಯ್ಕೆಯಾಗಿರುವ ಲಿಬರಲ್ ಪಕ್ಷದ ಜಸ್ಟಿನ್ ಟ್ರುಡೇವ್ ಅವರ ಜನಪ್ರಿಯತೆಯ ಅಲೆಯನ್ನೇರಿದ 15 ಅನಿವಾಸಿ ಭಾರತೀಯರು ಒಟ್ಟಾವಾ ಪ್ರಾಂತದಿಂದ ಸಂಸತ್‌ಗೆ ಪ್ರವೇಶ ಗಳಿಸಿಕೊಂಡಿದ್ದಾರೆ. ಕೆನಡಾದ ಸೇನಾಪಡೆಯಲ್ಲಿ ಯೋಧರಾಗಿ ಕಾರ್ಯನಿರ್ವಹಿಸಿದ್ದಲ್ಲದೆ 3 ಬಾರಿ ಆಫ್‌ಘಾನಿಸ್ತಾನ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಹರ್ಜಿತ್ ಸಜ್ಜನ್ ಲಿಬರಲ್ ಪಕ್ಷದಿಂದ ಆಯ್ಕೆಯಾಗಿದ್ದಾರೆ.



# ಆಫ್ರಿಕಾ ದ್ವೀಪ ರಾಷ್ಟ್ರದಿಂದ ದುರ್ಗೆ ಅಂಚೆಚೀಟಿ ಬಿಡುಗಡೆ

ಭಾರತದ ನವರಾತ್ರಿ ಉತ್ಸವ ಹಾಗೂ ದುರ್ಗಾ ಪೂಜೆಯ ಬಗೆಗೆ ಆಕರ್ಷಿತಗೊಂಡಿರುವ ಆಫ್ರಿಕಾದ ದ್ವೀಪರಾಷ್ಟ್ರ ಸಾವೊ ಟೊಮ್ ಮತ್ತು ಪ್ರಿನ್ಸಿಪ್, ದುರ್ಗಾದೇವಿಯ ಚಿತ್ರವಿರುವ ವಿಶೇಷ ಅಂಚೆಚೀಟಿಯನ್ನು ಬಿಡುಗಡೆ ಮಾಡಿದೆ. ಮಕ್ಮಲ್ ಬಟ್ಟೆಯ ನುಣುಪು ಹಾಗೂ ಹೊಳೆಯುವ ಗುಣಲಕ್ಷಣ ಹೊಂದಿರುವ ಈ ಅಂಚೆಚೀಟಿಯನ್ನು ಅಲ್ಲಿನ ಸರ್ಕಾರ ಬಿಡುಗಡೆ ಮಾಡಿದೆ. ಹುಲಿಯ ಮೇಲೆ ದುರ್ಗಾದೇವಿ ಕುಳಿತಿರುವ ಚಿತ್ರವನ್ನು ಅಂಚೆಚೀಟಿ ಹೊಂದಿದೆ. ದ್ವೀಪ ರಾಷ್ಟ್ರದಲ್ಲಿ ಇದರ ಬೆಲೆ 86 ಸಾವಿರ ದೊಬ್ರ (ಭಾರತದಲ್ಲಿ ರೂ.260). ಇದೀಗ 1500 ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ಸಾವಿರ ಅಂಚೆಚೀಟಿಗಳು ಭಾರತದ ಮಾರುಕಟ್ಟೆಯಲ್ಲಿ ಲಭ್ಯವಿರಲಿದೆ. ಮಿಕ್ಕ 500 ಅಂಚೆ ಚೀಟಿಗಳು ದ್ವೀಪ ರಾಷ್ಟ್ರದಲ್ಲಿಯೇ ಮಾರಾಟವಾಗಲಿದೆ.



# ವೈದ್ಯಕೀಯ ವೆಚ್ಚ ಕಡಿತಕ್ಕೆ ಯೋಗ, ಧ್ಯಾನ ಮಾಡಿ: ಅಮೆರಿಕ ಸಂಶೋಧಕರ ಸಲಹೆ

ನಿಮ್ಮ ಚೈತನ್ಯವನ್ನು ವೃದ್ಧಿಸಿಕೊಳ್ಳಲು, ವೈದ್ಯರನ್ನು ದೂರವಿಡಲು, ವೈದ್ಯಕೀಯ ವೆಚ್ಚವನ್ನು ಕಡಿಮೆಗೊಳಿಸಿಕೊಳ್ಳಲು ಮನಃಪೂರ್ವಕವಾಗಿ ಧ್ಯಾನ ಮಾಡಿ ಅಥವಾ ಯೋಗ ಮಾಡಿ ಎಂದು ಅಮೆರಿಕದ ಸಂಶೋಧಕರು ಸಲಹೆ ನೀಡಿದ್ದಾರೆ. ಕ್ರಮಬದ್ಧ ಉಸಿರಾಟ, ಮನಃಪೂರ್ವಕವಾದ ಧ್ಯಾನ, ಯೋಗ, ಪ್ರಾರ್ಥನೆಯ ನಿರಂತರ ಸಾಧನೆಯಿಂದ ಚೈತನ್ಯ ವರ್ಧಿಸಿಕೊಳ್ಳುವ ಮೂಲಕ ದೇಹಾರೋಗ್ಯವನ್ನು ಉಳಿಸಿಕೊಳ್ಳಬಹುದು. ಧ್ಯಾನ, ಯೋಗ, ಪ್ರಾರ್ಥನೆಯ ಮೂಲಕ ಚೈತನ್ಯ ವರ್ಧಿಸಿಕೊಂಡ ವ್ಯಕ್ತಿಗಳಿಗೆ ನಂತರದ ವರ್ಷಗಳಲ್ಲಿ ವೈದ್ಯಕೀಯ ಸೇವೆಗಳ ಅಗತ್ಯ ಕಡಿಮೆಯಾದದ್ದನ್ನು ಅಮೆರಿಕದ ನ್ಯೂ ಹ್ಯಾಂಪ್‌ಶೈರ್‌ನ ಡಾರ್ಟ್‌ಮೌತ್–ಹಿಚ್‌ಕಾಕ್ ಮೆಡಿಕಲ್ ಸೆಂಟರ್‌ನ ಅಧ್ಯಯನ ಮುಖ್ಯಸ್ಥ ಜೇಮ್ಸ್ ಸ್ಟಾಹ್ಲ್ ತಮ್ಮ ಅಧ್ಯಯನದ ವಿವರಗಳನ್ನು ಬಹಿರಂಗಪಡಿಸಿದ್ದಾರೆ. ಅಧ್ಯಯನಕ್ಕಾಗಿ ಸಂಶೋಧಕರು ಮೆಸ್ಸಾಚುಸೆಟ್ಸ್ ಜನರಲ್ ಹಾಸ್ಪಿಟಲ್‌ಗೆ ಸೇರಿದ ಹಾರ್ವರ್ಡ್‌ನ ಬೆನ್ಸನ್–ಹೆನ್ರಿ ಮನಸ್ಸು–ದೇಹ ಔಷಧ ಸಂಸ್ಥೆಯು ರೂಪಿಸಿದ ಎಂಟು ವಾರಗಳ ಕೋರ್ಸ್‌ನ್ನು ಬಳಸಿಕೊಂಡಿದ್ದರು. 4,400ಕ್ಕೂ ಹೆಚ್ಚು ಮಂದಿ ರಿಲ್ಯಾಕ್ಸೇಷನ್ ರೆಸ್ಪಾನ್ಸ್ ರೆಸಿಲೆನ್ಸಿ ಕಾರ್ಯಕ್ರಮದ (3ಆರ್‌ಪಿ) (ನಿರಾಳತೆ, ಸ್ಪಂದನೆ, ಚೈತನ್ಯ ಕಾರ್ಯಕ್ರಮ) ಪದವೀಧರರಿಂದ ಹಿಡಿದು ಈ ಕೋರ್ಸ್‌ಗೆ ಒಳಪಡದ 13,150 ಮಂದಿ ರೋಗಿಗಳ ಮೇಲೆ ಈ ಕೋರ್ಸ್ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂದು ಸಂಶೋಧಕರು ಅಧ್ಯಯನ ನಡೆಸಿದ್ದರು. ಕೋರ್ಸ್ ಮುಗಿದ ಒಂದು ವರ್ಷದ ಬಳಿಕ ರೆಸಿಲೆನ್ಸಿ ಕಾರ್ಯಕ್ರಮದ ಪದವೀಧರರು ಪಡೆದ ಆರೋಗ್ಯ ಸೇವೆಗಳ ಪ್ರಮಾಣ ಶೇಕಡಾ 43ರಷ್ಟು ಕಡಿಮೆಯಾಗಿತ್ತು. ಯಾವುದೇ ಔಪಚಾರಿಕ ತರಬೇತಿ ಇಲ್ಲದೇ ಇದ್ದರೂ ಈ ಮೂಲಕ ಚೈತನ್ಯ ವರ್ಧನೆ ಮಾಡಬಹುದು ಎಂಬುದನ್ನು ಸಂಶೋಧಕರು ಗಮನಿಸಿದರು. ಸೇವಾ ಕಾರ್ಯಗಳು, ವೃದ್ಧ ಬಂಧುಗಳ ಆರೋಗ್ಯ ಬಗ್ಗೆ ಕಾಳಜಿ ವಹಿಸುವುದು ಇತ್ಯಾದಿಗಳ ಮೂಲಕ ಇತರರೊಂದಿಗೆ ಸಂಪರ್ಕ ಹೆಚ್ಚಿಸಿಕೊಳ್ಳುವ ಅರ್ಥಪೂರ್ಣ ಕಾರ್ಯಗಳ ಮೂಲಕ ಚೈತನ್ಯ ಹೆಚ್ಚಿಸಿಕೊಳ್ಳಬಹುದು ಎಂಬುದೂ ಈ ಅಧ್ಯಯನದಿಂದ ಸ್ಪಷ್ಟಗೊಂಡಿದೆ.

# ನೀರಿಲ್ಲದ ನೆಲದಲಿ ಹಾಲಿನ ಹೊಳೆ

ನೆಲದ ಮಾತು

ಸುಮಾರು 250–300 ಕುಟುಂಬಗಳು ವಾಸಿಸುವ ಪುಟ್ಟ ಗ್ರಾಮಗಳವು. ಬೇಸಿಗೆಯಲ್ಲಿ ಕುಡಿಯುವ ಹನಿ ನೀರಿಗೂ ತತ್ವಾರ ಪಡುವ ಮಡ್ಡಿಗಾಡು ಪ್ರದೇಶ. ಮಳೆಯಾದರೆ ಮಾತ್ರವೇ ಹಸಿರಾಗುವ ಭೂಮಿ. ಆದರೆ, ಇಂತಹ ಬರಪೀಡಿತ ಗ್ರಾಮಗಳಲ್ಲಿ ಈಗ ಹಾಲಿನ ಹೊಳೆ ಹರಿಯುತ್ತಿದೆ. ನಿತ್ಯ ಏನಿಲ್ಲವೆಂದರೂ ಎಂಟು ಸಾವಿರ ಲೀಟರ್ ಹಾಲು ಉತ್ಪಾದನೆಯಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರದ ವಿವಿಧೆಡೆ ಸರಬರಾಜು ಆಗುತ್ತಿದೆ.

ಇದು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮುಗಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮುಗಳಿ ಹಾಗೂ ಕಮತೇನಟ್ಟಿ ಗ್ರಾಮದ ಚಿತ್ರಣ. ಸತತ ಅನಾವೃಷ್ಟಿಯಿಂದ ಬರಪೀಡಿತ ಪ್ರದೇಶವೆಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಗ್ರಾಮಗಳಿವು. ಇದೇ ಚಿತ್ರಣವನ್ನು ಮನಸ್ಸಿನಲ್ಲಿಟ್ಟು ಕೊಂಡು ಗ್ರಾಮವನ್ನು ಪ್ರವೇಶಿಸಿದರೆ, ಅಚ್ಚರಿಯಾಗುತ್ತದೆ. ಗ್ರಾಮ ಪ್ರವೇಶಿಸುತ್ತಿದ್ದಂತೆಯೇ ಹಸುಗಳ ಅಂಬಾ... ಎನ್ನುವ ದನಿ ಸ್ವಾಗತಿಸಿದರೆ, ಹಸುಗಳ ಪಾಲನೆ–ಪೋಷಣೆಯಲ್ಲಿ ಕೃಷಿಕರು ತಲ್ಲೀನರಾಗಿರುವ ದೃಶ್ಯ ಎಲ್ಲೆಡೆ ಕಾಣ ಸಿಗುತ್ತದೆ. ಇದಕ್ಕೆಲ್ಲಾ ಕಾರಣ, ಕೃಷಿಗೆ ಉಪ ಕಸುಬಾಗಿರುವ ಹೈನುಗಾರಿಕೆ ಇಲ್ಲಿ ಉದ್ಯಮದ ಸ್ವರೂಪ ಪಡೆದಿರುವುದು. ಎರಡೂ ಗ್ರಾಮಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಹಸುಗಳನ್ನು ಸಾಕಲಾಗಿದೆ.

**ಅಚ್ಚರಿಯ ಕ್ಷೀರಕ್ರಾಂತಿ :** ಮುಗಳಿ ಗ್ರಾಮವೊಂದರಲ್ಲಿಯೇ ಬೆಳಿಗ್ಗೆ ಮತ್ತು ಸಂಜೆ ಸೇರಿದಂತೆ ಕನಿಷ್ಠ 6 ಸಾವಿರ ಲೀಟರ್ ಹಾಗೂ ಕಮತೇನಟ್ಟಿಯಲ್ಲಿ 2 ಸಾವಿರ ಲೀಟರ್‌ಗೂ ಹೆಚ್ಚು ಹಾಲು ಉತ್ಪಾದನೆ ಆಗುತ್ತಿದೆ. ಇಲ್ಲಿಂದ ಕರ್ನಾಟಕ ಹಾಲು ಒಕ್ಕೂಟ, ಆದಿತ್ಯ ಮಿಲ್ಕ್ ಹಾಗೂ ಮಹಾರಾಷ್ಟ್ರದ ವಾರಣಾ ಮೊದಲಾದ ಕಡೆಗಳಲ್ಲಿ ಹಾಲು ಸರಬರಾಜು ಆಗುತ್ತದೆ.

ರೈತರು ಮನೆಗೆ ಒಂದೆರೆಡು ಹಸು, ಎಮ್ಮೆಗಳನ್ನು ಸಾಕಿ ಕುಟುಂಬಕ್ಕೆ ಬೇಕಾಗುವ ಹೈನುಂಡು ಉಳಿದ ಅಷ್ಟಿಷ್ಟು ಹಾಲು ಮಾರಾಟ ಮಾಡುವುದು ಸಾಮಾನ್ಯ. ಆದರೆ, ಮುಗಳಿ ಗ್ರಾಮದಲ್ಲಿ ಕೃಷಿಕರ ಉಪಕಸುಬು ಹೈನುಗಾರಿಕೆ ಇಂದು ಉದ್ಯಮವಾಗಿ ಪರಿವರ್ತಿತವಾಗಿರುವುದರ ಹಿಂದೆ ಸುಶಿಕ್ಷಿತ ಯುವಕರ ಶ್ರಮ ಅಡಗಿದೆ. ಗ್ರಾಮದ ಪದವೀಧರರು ಮಾಡಿರುವ ಈ ಕ್ಷೀರಕ್ರಾಂತಿ ಇತರ ಕೃಷಿಕರಿಗೆ ಮಾದರಿಯಾಗಿದೆ.

**ಪದವೀಧರರ ಪರಿಶ್ರಮ:** ಹಾಸಿ ಹೊದ್ದುಕೊಳ್ಳುವಷ್ಟು ಬಡತನದಿಂದ ಬಳಲುತ್ತಿದ್ದ ಕುಟುಂಬಗಳವು. ಕಷ್ಟದಲ್ಲೇ ಪದವಿ ಶಿಕ್ಷಣ ಪಡೆದರೂ ಕೆಲಸ ದೊರಕದೇ ನಿರಾಸೆ. ಆದರೆ, ಇದರಿಂದ ಹತಾಶರಾಗದ ಯುವಕರು ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಕ್ಷೀರ ಕ್ರಾಂತಿಗೆ ಕೈ ಹಾಕಿದರು. ಸುಶಿಕ್ಷಿತರೂ ಹೈನುಗಾರಿಕೆ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಜೊತೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ನೂರಾರು ಜನರಿಗೆ ಉದ್ಯೋಗ ಸೃಷ್ಟಿ ಮಾಡಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ. ಎಲ್ಲ ಗ್ರಾಮಗಳಲ್ಲೂ ಕೃಷಿಕರು ಹಸು, ಎಮ್ಮೆಗಳನ್ನು ಸಾಕುತ್ತಾರೆ. ಆದರೆ, ಪ್ರತಿ ಗ್ರಾಮದಲ್ಲಿ ಕ್ಷೀರ ಕ್ರಾಂತಿ ಆಗುವುದಿಲ್ಲ.

ತಮ್ಮಾಣಿ ಬಂಬಲವಾಡಿ ಎಂಬುವರು ನೌಕರಿ ಸಿಗದೇ ಇದ್ದಾಗ ಹತಾಶರಾಗದೇ 2004ರಲ್ಲಿ 15 ಹಸುಗಳನ್ನು ಸಾಕುವ ಮೂಲಕ ಮುಗಳಿ ಗ್ರಾಮದಲ್ಲಿ ಕ್ಷೀರ ಕ್ರಾಂತಿಗೆ ನಾಂದಿ ಹಾಡಿದರು. ಸದ್ಯ ಅವರ ಫಾರಂನಲ್ಲಿ 110 ಹಸುಗಳಿವೆ. ನಿತ್ಯವೂ ಒಂದು ಸಾವಿರಕ್ಕೂ ಹೆಚ್ಚು ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಕಾಲ ಕ್ರಮವಾಗಿ ಬಿ.ಎ., ಡಿ.ಇಡಿ ಶಿಕ್ಷಣ ಪಡೆದಿರುವ ಮಾರುತಿ ಕಳಸಣ್ಣವರ, ಬಿ.ಎ., ಬಿ.ಇಡಿ ಪದವೀಧರ ಮಲ್ಲಪ್ಪಾ ಕೊಟಬಾಗಿ, ಆರ್ಕಿಟೆಕ್ಟ್ ಡಿಪ್ಲೊಮಾ ಪದವೀಧರ ಚಂದ್ರಶೇಖರ ಬಂಬಲವಾಡಿ ಮೊದಲಾದ 20ಕ್ಕೂ ಹೆಚ್ಚು ವಿದ್ಯಾವಂತ ಯುವಕರೂ ಹೈನುಗಾರಿಕೆ ಆರಂಭಿಸಿದ್ದು, ಗ್ರಾಮದಲ್ಲಿ ಸದ್ಯ 35ಕ್ಕೂ ಹೆಚ್ಚು ಡೇರಿ ಫಾರಂಗಳಿವೆ. ಅಲ್ಲದೇ ಇನ್ನುಳಿದ ಬಹುತೇಕ ರೈತ ಕುಟುಂಬಗಳಿಗೂ ಹೈನುಗಾರಿಕೆ ಜೀವನಾಧಾರವಾಗಿದೆ. ಮನೆಗೆ ಕನಿಷ್ಠ ನಾಲ್ಕಾರು ಹಸು, ಎಮ್ಮೆಗಳನ್ನು ಸಾಕಿ ಆರ್ಥಿಕ ಸ್ವಾವಲಂಬನೆಯತ್ತ ಸಾಗುತ್ತಿದ್ದಾರೆ.

**ಆರ್ಥಿಕ ಸಬಲತೆ:** ಬಡತನದ ಕಣ್ಣೀರಿನಲ್ಲಿ ಕೈ ತೊಳೆದುಕೊಳ್ಳುತ್ತಿದ್ದ ಕೃಷಿಕರಿಗೆ ಈಗ ಕೈ ತುಂಬ ಕಾಸು ಸಿಗುತ್ತಿದೆ. ನಿತ್ಯವೂ ಸಾವಿರಾರು ರೂಪಾಯಿ ಆದಾಯ ಪಡೆಯುತ್ತಿದ್ದಾರೆ. ಹಸುವೊಂದು ಕರು ನೀಡಿದ ಒಂದು ವರ್ಷದ ತನಕ ನಿತ್ಯವೂ 16 ರಿಂದ 18 ಲೀಟರ್ ಹಾಲು ನೀಡುತ್ತದೆ. ಶೇ. 75 ರಷ್ಟು ಉತ್ಪಾದನಾ ವೆಚ್ಚವಾದರೆ ಶೇ. 25 ರಷ್ಟು ಆದಾಯ ಲಭಿಸುತ್ತದೆ ಎಂಬುದು ಕೃಷಿಕರ ಲೆಕ್ಕಾಚಾರ. ಬ್ಯಾಂಕ್‌ಗಳಿಂದ ಸಾಲ ಪಡೆದು ಹಸು ಖರೀದಿಸಿ ಹೈನುಗಾರಿಕೆ ಆರಂಭಿಸಿದ ಯುವಕರು ಇಂದು ಸಾಲ ಮರುಪಾವತಿ ಮಾಡಿ ಪ್ರಗತಿಯತ್ತ ಮುನ್ನಡೆಯುತ್ತಿದ್ದಾರೆ.

**ಭೂ ಫಲವತ್ತತೆ :** ಹೈನುಗಾರಿಕೆ ಮುಗಳಿ ಮತ್ತು ಕಮತೇನಟ್ಟಿ ಗ್ರಾಮಸ್ಥರ ಆರ್ಥಿಕ ಸಬಲತೆ ಮಾತ್ರವಲ್ಲ, ಭೂಮಿಯ ಫಲವತ್ತತೆ ಹೆಚ್ಚಿಸಲೂ ಸಹಕಾರಿಯಾಗಿದೆ. ಸೆಗಣಿ, ಗೊಬ್ಬರ, ಗೋಮೂತ್ರ ಮೊದಲಾದ ತ್ಯಾಜ್ಯಗಳನ್ನು ಭೂಮಿಗೆ ಗೊಬ್ಬರವಾಗಿ ನೀಡುವ ನೀರಾವರಿ ಸೌಕರ್ಯ ಹೊಂದಿರುವ ರೈತರು ಹೆಚ್ಚಿನ ಬೆಳೆ ಇಳುವರಿಯನ್ನೂ ಪಡೆದುಕೊಳ್ಳುತ್ತಿದ್ದಾರೆ. ಡೇರಿ ಫಾರಂ ಹೊಂದಿರುವ ರೈತರು ಸೆಗಣಿ ಗೊಬ್ಬರದಿಂದಲೂ ಹಣ ಗಳಿಸುತ್ತಿದ್ದಾರೆ.

ಕೃಪೆ: ಪ್ರಜಾವಾಣಿ

(ಪುಟ 1 ರಿಂದ)

# ಪ್ರಗತಿ ಪಥದತ್ತ ವಿಶ್ವಾಸದ ಹೆಜ್ಜೆಗಳು

ನೀಡಿವೆ. ಜಗತ್ತಿಗೆ ಹೊಸ ಆಧುನಿಕ ಭಾರತವನ್ನು ಪರಿಚಯಿಸಲಾಗುತ್ತಿದೆ ಎಂಬಂತೆ ಭಾಸವಾಗುತ್ತಿದೆ. ಜಗತ್ತಿಗೆ ಭಾರತವೊಂದರ ಅನುಭವವಾಗುತ್ತಿದೆ. ಭಾರತವು ಆತ್ಮಗೌರವ ಮತ್ತು ಆತ್ಮವಿಶ್ವಾಸ ಭರಿತವಾಗಿದೆ. ರಾಷ್ಟ್ರೀಯ ಹಿತಾಸಕ್ತಿಗಳು ಅಡಕವಾಗಿರುವ ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯಲ್ಲಿ ಹಿಂಜರಿಕೆಯಿಲ್ಲದೆ ಸುಸ್ಪಷ್ಟ ನಿಲುವುಗಳನ್ನು ತಾಳುತ್ತಿದೆ. ಜಗತ್ತಿನ ಯಾವುದೇ ಕಡೆ ಗಂಡಾಂತರದಲ್ಲಿರುವ ದೇಶಗಳಿಗೆ ಸಹಾಯ ಹಸ್ತವನ್ನು ಚಾಚುತ್ತಿದೆ.

ಭಾರತವು ಸಮಗ್ರ ಹೊಸ ಸ್ವರೂಪದೊಂದಿಗೆ ಪುನರಾವತಾರ ಪಡೆಯುತ್ತಿದೆ. ಭಾರತದ ಹೊಸ ಅವತಾರವನ್ನು ನೋಡಲು ಜಗತ್ತು ಅತ್ಯಂತ ಆಶಾವಾದದಿಂದ ಕಾತರಿಸುತ್ತಿದೆ. ಭಾರತದ ಗೀತೆ, ಯೋಗ ಮತ್ತು ಬೌದ್ಧಿಕ ಚಿಂತನೆಗಳು ಹಿಂದೆಂದಿಗಿಂತಲೂ ಹೆಚ್ಚು ಸಾರ್ವತ್ರಿಕವಾಗಿ ಸ್ವೀಕಾರವಾಗುತ್ತಿದೆ. ಭಾರತೀಯ ಅಂತಃಪ್ರಜ್ಞೆಯನ್ನು ಮತ್ತು ಸದ್ಭಾವನೆಯನ್ನು ಬೆಳೆಸುವ ಮತ್ತು ಅದರ ಗೌರವವನ್ನು ಸಂರಕ್ಷಿಸಲು ಮತ್ತು ಹೆಚ್ಚಿಸುವ ಅಗತ್ಯದ ದೃಷ್ಟಿಯಿಂದ ಸರಕಾರದ ಮಟ್ಟದಲ್ಲಿ ನೀತಿಗಳನ್ನು ರೂಪಿಸಲಾಗುತ್ತಿದೆ.

ನೀತಿ ಆಯೋಗದ ಸದಸ್ಯರೂ ಡಿ.ಆರ್.ಡಿ.ಒ.ದ ಮಾಜಿ ಮುಖ್ಯಸ್ಥರೂ ಆಗಿರುವ ಖ್ಯಾತ ವಿಜ್ಞಾನಿ ಡಾ. ವಿಜಯ್ ಸಾರಸ್ವತ್ ಅವರು ಕಾರ್ಯಕ್ರಮದಲ್ಲಿ ಅಧ್ಯಕ್ಷರಾಗಿ ಭಾಗವಹಿಸಿದ್ದರು.

ಸಂಪಾದಕೀಯ ಸಹಕಾರ ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್




ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದ ಜನಪ್ರತಿನಿಧಿಗಳ ಹೆಸರನ್ನು ಯಾವುದೇ ತಾರತಮ್ಯ ಮಾಡದೇ ಪ್ರಾಮಾಣಿಕವಾಗಿ ಘೋಷಿಸುವಂತೆ ಚುನಾವಣಾ ಆಯೋಗವು ಸಂಸತ್ ಹಾಗೂ ರಾಜ್ಯ ವಿಧಾನಸಭೆಗಳಿಗೆ ಸೂಚನೆ ನೀಡಿದೆ. ಇಂತಹ ಪ್ರಕರಣಗಳಲ್ಲಿ ವಿಳಂಬ ಆಗುತ್ತಿರುವುದರಿಂದ ಸದಸ್ಯರು ಶಾಸಕ ಅಥವಾ ಸಂಸದರಾಗಿ ಅಕ್ರಮವಾಗಿ ಮುಂದುವರಿಯಲು ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳಿದೆ. ಜನಪ್ರತಿನಿಧಿಯ ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದ ಬಗ್ಗೆ ಮಾಹಿತಿ ಗೊತ್ತಾದ ತಕ್ಷಣ ಆತನನ್ನು ಅನರ್ಹಗೊಳಿಸುವುದಕ್ಕೆ ಏಳುದಿನಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳಬಾರದು. ವಿಳಂಬವಾದಲ್ಲಿ ಅದು ಸಂವಿಧಾನದ 103ನೇ ಪರಿಚ್ಛೇದ ಹಾಗೂ ಸುಪ್ರೀಂಕೋರ್ಟ್ ಹಾಕಿಕೊಟ್ಟ ನಿಯಮದ ಉಲ್ಲಂಘನೆಯಾಗುತ್ತದೆ. ಆದರೂ ಕೆಲವೊಂದು ಪ್ರಕರಣದಲ್ಲಿ ಸದನದ ಕಾರ್ಯಾಲಯದಿಂದ ಇಂತಹ ಅಧಿಸೂಚನೆ ಹೊರಡಿಸುವಲ್ಲಿ ವಿಳಂಬವಾಗುತ್ತಿದೆ ಎಂದು ಲೋಕಸಭೆ, ರಾಜ್ಯಸಭೆ ಹಾಗೂ ವಿಧಾನಸಭೆ ಕಾರ್ಯಾಲಯಗಳಿಗೆ ಹೊರಡಿಸಿರುವ ಸೂಚನೆಯಲ್ಲಿ ಆಯೋಗ ತಿಳಿಸಿದೆ.

---




**ಶಾಲಾ ಆವರಣದ ಸುತ್ತಮುತ್ತ ನೂಡಲ್ಸ್, ಚಿಪ್ಸ್, ತಂಪುಪಾನೀಯ ಸೇರಿದಂತೆ ಕೊಬ್ಬಿನ ಅಂಶವುಳ್ಳ (ಜಂಕ್‌ಫುಡ್) ಆಹಾರ ಮತ್ತು ಮಿಠಾಯಿ ಮಾರಾಟದ ಮೇಲೆ ನಿಯಂತ್ರಣ ಹೇರಲು ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ನಿರ್ಧರಿಸಿದೆ. ಮಕ್ಕಳಿಗೆ ಯಾವ ಆಹಾರ ಆಯ್ಕೆ ಮಾಡಬೇಕು ಎನ್ನುವುದನ್ನು ನಿರ್ಣಯಿಸಲು ಸಾಧ್ಯವಿಲ್ಲ ಮತ್ತು ಹೆಚ್ಚು ಕೊಬ್ಬು, ಉಪ್ಪು ಮತ್ತು ಸಿಹಿ ಇರುವ ಆಹಾರದ ಪ್ರಚಾರ ಮಾಡಲು ಶಾಲೆಗಳು ಸರಿಯಾದ ಸ್ಥಳಗಳಲ್ಲ ಎಂದು ಎಫ್‌ಎಸ್‌ಎಸ್‌ಎಐ ಹೇಳಿದೆ.**

---



ವಿದೇಶಿ ಬ್ಯಾಂಕ್ ಖಾತೆಗಳಲ್ಲಿರುವ ಮೊತ್ತಕ್ಕಿಂತ ದೇಶದಲ್ಲಿ ಕೂಡಿಟ್ಟಿರುವ ಕಪ್ಪುಹಣದ ಪ್ರಮಾಣ ಅಧಿಕವಿದೆ ಎಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ಅಭಿಪ್ರಾಯಪಟ್ಟಿದೆ. ಈಗ ವಿದೇಶಗಳಲ್ಲಿರುವುದಕ್ಕಿಂತ ಹೆಚ್ಚಿನ ಪ್ರಮಾಣದ ಕಪ್ಪುಹಣವನ್ನು ದೇಶದೊಳಗೇ ಕೂಡಿಡಲಾಗಿದೆ. ಕಪ್ಪುಹಣ ಚಲಾವಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದರೆ ಅದು ವಿದೇಶಗಳಿಗೆ ಹರಿದು ಹೋಗುವುದನ್ನೂ ತಡೆಗಟ್ಟಬಹುದು ಎಂದು ಕಟಕ್‌ನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದ ಎಸ್‌ಐಟಿಯ ಉಪಾಧ್ಯಕ್ಷ ಅರಿಜಿತ್ ತಿಳಿಸಿದರು.

---



**ಮಾಜಿ ರಾಷ್ಟ್ರಪತಿ ದಿವಂಗತ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜನ್ಮಸ್ಥಳವಾದ ತಮಿಳುನಾಡಿನ ರಾಮೇಶ್ವರದಲ್ಲಿ ಅವರ ಸ್ಮಾರಕವನ್ನು ನಿರ್ಮಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಮುಂದಿನ ಪೀಳಿಗೆಗೆ ಸ್ಫೂರ್ತಿಯಾಗುವ ನಿಟ್ಟಿನಲ್ಲಿ ರಾಮೇಶ್ವರದಲ್ಲಿ ಅಮೃತನಗರ ಯೋಜನೆಯಡಿಯಲ್ಲಿ ಕಲಾಂ ಅವರ ಗೌರವಾರ್ಥ ಸ್ಮಾರಕ ನಿರ್ಮಾಣವಾಗಲಿದೆ. ಅವರ ಸ್ಮರಣಾರ್ಥ ಅಂಚೆ ಚೀಟಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.**

---



ದೇಶದ 300 ಸಂರಕ್ಷಿತ ಅರಣ್ಯ ಪ್ರದೇಶಗಳನ್ನು ಸೂಕ್ಷ್ಮ ಪರಿಸರ ವಲಯಗಳೆಂದು ಮುಂದಿನ ಮಾ. 26ರೊಳಗೆ ಘೋಷಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈಗಾಗಲೇ ರಾಷ್ಟ್ರೀಯ ಉದ್ಯಾನ ಮತ್ತು ವನ್ಯಜೀವಿಧಾಮಗಳ 10 ಕಿ.ಮೀ. ವ್ಯಾಪ್ತಿಯಲ್ಲಿ ಸೂಕ್ಷ್ಮ ಪರಿಸರ ವಲಯ ಘೋಷಣೆ ಸಂಬಂಧ ರಾಜ್ಯದ 30 ಸಂರಕ್ಷಿತ ಅರಣ್ಯ ಪ್ರದೇಶಗಳು ಸೇರಿ ದೇಶಾದ್ಯಂತ ಇರುವ 500 ಸಂರಕ್ಷಿತ ಅರಣ್ಯ ಪ್ರದೇಶಗಳನ್ನು ಸೂಕ್ಷ್ಮ ಪರಿಸರ ವಲಯಗಳಾಗಿ ಘೋಷಿಸಬೇಕೆಂಬ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. ಅರಣ್ಯ ಸಂಪತ್ತು ಉಳಿದರೆ ಮಾತ್ರ ನಾವೆಲ್ಲರೂ ಉಳಿಯಲು ಸಾಧ್ಯ. ಈ ನಿಟ್ಟಿನಲ್ಲಿ ಸೂಕ್ಷ್ಮ ಪರಿಸರ ವಲಯದ ಘೋಷಣೆಗೆ ಕೇಂದ್ರ ಸರ್ಕಾರ ಬದ್ಧವಾಗಿದೆ. ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅನುಮೋದನೆ ನೀಡಲಾಗುವುದು ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದರು. ಸಂರಕ್ಷಿತ ಅರಣ್ಯ ಪ್ರದೇಶದ ಅಂಚಿನ ಕನಿಷ್ಠ 10 ಕಿ.ಮೀ. ವ್ಯಾಪ್ತಿಯನ್ನು ಸೂಕ್ಷ್ಮ ಪರಿಸರ ವಲಯವಾಗಿ ಘೋಷಿಸಬೇಕೆಂದು ಸುಪ್ರೀಂಕೋರ್ಟ್ 10 ವರ್ಷಗಳ ಹಿಂದೆಯೇ ಆದೇಶಿಸಿತ್ತು.

---



**1990ರಲ್ಲಿ ಜಗತ್ತಿನಲ್ಲಿ ಕಡುಬಡವರ ಪ್ರಮಾಣ ಶೇ. 37ರಷ್ಟಿತ್ತು. 2012ರಲ್ಲಿ ಇದು ಶೇ. 12.6ಕ್ಕೆ ಕುಸಿಯಿತು. ಈಗ ಇದು ಶೇ. 9.6ಕ್ಕೆ ಇಳಿದಿದೆ ಎಂದು ವಿಶ್ವಬ್ಯಾಂಕ್ ತಿಳಿಸಿದೆ. ಬಡತನದ ಪ್ರಮಾಣ ಎರಡಂಕಿಗಿಂತ ಕೆಳಗೆ ಇಳಿದಿರುವುದು ಇದೇ ಮೊದಲು. ವಿಶ್ವದಾದ್ಯಂತ 1990ರ ನಂತರ ಕೈಗೊಳ್ಳಲಾದ ಆರ್ಥಿಕ ಸುಧಾರಣೆಯ ಕ್ರಮಗಳು ಇದಕ್ಕೆ ಕಾರಣ ಎನ್ನಲಾಗುತ್ತಿದೆ. ಜಾಗತಿಕ ಬಡತನಕ್ಕೆ ಸಂಬಂಧಪಟ್ಟಂತೆ ವಿಶ್ವಬ್ಯಾಂಕ್‌ನ ಇತ್ತೀಚಿನ ವರದಿಯಲ್ಲಿ ಭಾರತದಲ್ಲಿರುವ ಬಡತನದ ಪ್ರಮಾಣ ಕಡಿಮೆಯಾಗುತ್ತಿದೆ ಎಂದು ವರದಿ ಮಾಡಿದೆ. ಈ ಮೊದಲು, ದಿನದ ಆದಾಯ 1.25 ಡಾಲರ್ ಅಂದರೆ ರೂ. 80ಕ್ಕಿಂತ ಕಡಿಮೆ ಇರುವವರನ್ನು ಬಡವರು ಎಂದು ಗುರುತಿಸಲಾಗುತ್ತಿತ್ತು. ವಿಶ್ವಬ್ಯಾಂಕ್‌ನ ಪರಿಷ್ಕೃತ ಮಾನದಂಡದಂತೆ 1.9 ಡಾಲರ್ ಅಂದರೆ ಸುಮಾರು 120ಕ್ಕಿಂತ ಕಡಿಮೆ ಆದಾಯದವರು ಈಗ ಬಡವರು. ಇದರ ನಂತರವೂ ಬಡತನದ ವ್ಯಾಖ್ಯೆಯಿಂದ ಮೇಲೆ ಬಂದವರ ಪ್ರಮಾಣ ಹೆಚ್ಚಾಗಿದೆ.**

---

# ಸಾಲುದ್ದದ ಸುದ್ದಿಗಳು



ಅಮೆರಿಕದ ರಾಷ್ಟ್ರೀಯ ಮಹಿಳಾ ಹಾಲ್ ಆಫ್ ಫೇಮ್ ಸದಸ್ಯೆ ಅನ್ನೆ ಬ್ಯಾನ್ ಕ್ರಾಫ್ಟ್ ನೇತೃತ್ವದ 7 ಮಂದಿ ಶೋಧಕ ಮಹಿಳೆಯರು ಜಾಗತಿಕ ಜಲಸಂರಕ್ಷಣೆಯ 'ನೀರಿನ ಹಾದಿ' ಎಂಬ ಜನ ಜಾಗೃತಿ ಯಾತ್ರೆ ಹಮ್ಮಿಕೊಂಡಿದ್ದಾರೆ. ಈ ಯಾತ್ರೆಯು ಎಲ್ಲಾ 7 ಖಂಡಗಳಲ್ಲೂ ಸಂಚರಿಸಲಿದೆ. ಯಾತ್ರೆಯ ಮೊದಲ ಹೆಜ್ಜೆಯನ್ನು ಗಂಗಾ ನದಿಯಾತ್ರೆಯ ಮೂಲಕ ಅಭಿಯಾನ ಪ್ರಾರಂಭಿಸಲು ಮುಂದಾಗಿದ್ದಾರೆ. ಮೌಂಟ್ ಎವರೆಸ್ಟ್ ಏರಿದ ಸಾಧನೆ ಮಾಡಿರುವ ಭಾರತೀಯ ಮಹಿಳೆ ಕೃಷ್ಣಾ ಪಾಟೀಲ್ ಸಹ ಈ ತಂಡದಲ್ಲಿದ್ದಾರೆ. ಗಂಗಾ ನದಿ ಬಯಲಿನಲ್ಲಿ ಸುಮಾರು 2400 ಕಿ.ಮೀ ಕ್ರಮಿಸಲಿರುವ ಈ ತಂಡವು ಯುವಜನತೆಯಲ್ಲಿ ಜಾಗತಿಕ ಜಲಜಂಜಾಟದ ಬಗ್ಗೆ ಜಾಗೃತಿ ಮೂಡಿಸುವುದು ಯಾತ್ರೆಯ ಉದ್ದೇಶ. ಗಂಗಾನದಿಯ ಯಾತ್ರೆಯು ಅಕ್ಟೋಬರ್ 20–21ರಂದು ಹಿಮಾಲಯದ ಗಂಗೋತ್ರಿಯ ಗೋಮುಖದಿಂದ ಪ್ರಾರಂಭವಾಗಲಿದೆ. ಮುಖ್ಯವಾಗಿ ಪಾರಂಪರಿಕ ನಗರಗಳಾದ ಕಾನ್ಪುರ, ಅಲಹಾಬಾದ್, ವಾರಾಣಸಿ, ಪಾಟ್ನಾ ನಗರಗಳನ್ನು ಹಾದು ಡಿಸೆಂಬರ್‌ನಲ್ಲಿ ಕೋಲ್ಕತ್ತಾ ತಲುಪುವ ಮೂಲಕ ಜಾಗೃತಿಯಾತ್ರೆಯು ಭಾರತದಲ್ಲಿ ಕೊನೆಗೊಳ್ಳಲಿದೆ. ಪ್ರತಿ ವರ್ಷ ಒಂದೊಂದು ಖಂಡಗಳಿಗೆ ಭೇಟಿ ನೀಡಲು ತಂಡ ಯೋಜನೆ ಹಾಕಿಕೊಂಡಿದೆ. ಅನೇಕ ಅಂತಾರಾಷ್ಟ್ರೀಯ ಸಂಸ್ಥೆಗಳು ಜಲ ಸಂರಕ್ಷಣಾ ಯಾತ್ರೆಗೆ ಕೈಜೋಡಿಸಿವೆ.

---



**ಸಿಂಗಾಪುರ ಟೆಕ್ನಾಲಜಿಸ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ 500 ಕೆ.ಜಿ. ತೂಕದ ಭೂ ವೀಕ್ಷಣಾ ಉಪಗ್ರಹ ಮತ್ತು ಸಿಂಗಾಪುರ ವಿಶ್ವವಿದ್ಯಾಲಯದ ಐದು ಸಣ್ಣ ಉಪಗ್ರಹಗಳು ಸೇರಿದಂತೆ ಸಿಂಗಾಪುರದ ಆರು ಉಪಗ್ರಹಗಳನ್ನು ಡಿಸೆಂಬರ್‌ನಲ್ಲಿ ಭಾರತ ಉಡಾವಣೆ ಮಾಡಲಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯ ವಾಣಿಜ್ಯ ವ್ಯವಹಾರಗಳ ಮುಖ್ಯಸ್ಥ ವಿ.ಎಸ್. ಹೆಗ್ಡೆ ತಿಳಿಸಿದರು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ (ಇಸ್ರೋ)ದ ಮಹತ್ವಾಕಾಂಕ್ಷಿತ ಪೋಲಾರ್ ಉಪಗ್ರಹ ಉಡಾವಣಾ ನೌಕೆ (ಪಿಎಸ್‌ಎಲ್‌ವಿ) ಸಿಂಗಾಪುರದ ಉಪಗ್ರಹಗಳನ್ನು ಸಮಭಾಜಕ ಕಕ್ಷೆಯ ಸಮೀಪಕ್ಕೆ, ಅಂದರೆ ದಕ್ಷಿಣದ ಭೂಮಧ್ಯೆ ರೇಖೆಗಿಂತ 15 ಡಿಗ್ರಿ ಕೆಳಗೆ ಸೇರಿಸಲಿದೆ. ಇದೇ ಮೊದಲ ಬಾರಿಗೆ ವಾಣಿಜ್ಯ ಉದ್ದೇಶಿತ ರಾಕೆಟ್‌ನಲ್ಲಿ ಇಲೆಕ್ಟ್ರೋ ಆಪ್ಟಿಕಲ್ ಕ್ಯಾಮೆರಾ ಕೊಂಡಯ್ಯಲಿದೆ. ಹವಾಮಾನ ವೈಪರೀತ್ಯ, ಪ್ರಾಕೃತಿಕ ಅವಘಡ, ದೇಶದ ರಕ್ಷಣೆ, ನಗರಗಳ ಯೋಜನೆ ಇತ್ಯಾದಿ ಕಾರ್ಯಗಳಿಗಾಗಿ ಈ ಉಪಗ್ರಹಗಳನ್ನು ಸಿಂಗಾಪುರ ಉಡಾವಣೆ ಮಾಡುತ್ತಿದೆ. ಜರ್ಮನಿಯ ಬಾಹ್ಯಾಕಾಶ ಸಂಸ್ಥೆ (ಜಿಎಲ್‌ಆರ್)ಯ 900 ಕೆಜಿಯ ಸಂವಹನ ಉಪಗ್ರಹ (ಐಸ್ಯಾಟ್)ವನ್ನು 2016ರಲ್ಲಿ ಭಾರತ ಆಂಧ್ರಪ್ರದೇಶದ ಶ್ರೀಹರಿಕೋಟ ದಿಂದ ಉಡಾವಣೆ ಮಾಡಲಿದೆ. ಪ್ರಸ್ತುತ ವಾಣಿಜ್ಯ ಉದ್ದೇಶಿತ 9 ರಾಷ್ಟ್ರಗಳ 23 ಉಪಗ್ರಹಗಳ ಉಡಾವಣೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ವಿಶ್ವದ ಸುಮಾರು 15,000 ಉಪಗ್ರಹಗಳು ಉಡಾವಣೆಗಾಗಿ ಭಾರತದ ಕದ ತಟ್ಟುತ್ತಿವೆ ಎಂದು ಅವರು ತಿಳಿಸಿದರು.**

---


## ಪಟಾಕಿ ಪೊಟ್ಟಣಗಳ ಮೇಲೆ ದೇವತೆಗಳ ಚಿತ್ರಕ್ಕೆ ನಿಷೇಧ



**ಪಟಾಕಿಗಳ ಪೊಟ್ಟಣದ ಮೇಲೆ ಹಿಂದೂ ದೇವತೆಗಳ ಚಿತ್ರವಿರುವ ಲೇಬಲ್‌ಗಳನ್ನು ಬಳಸುವುದಕ್ಕೆ ತಮಿಳುನಾಡಿನ ವಿರುಧುನಗರ ಜಿಲ್ಲಾಡಳಿತ ನಿಷೇಧ ಹೇರಿದೆ. ದೇವತೆಗಳ ಚಿತ್ರವಿರುವ ಲೇಬಲ್‌ಗಳನ್ನು ಬಳಸುವುದರಿಂದ ಸಮುದಾಯ ಅಥವಾ ವ್ಯಕ್ತಿಯ ಭಾವನೆಗೆ ಧಕ್ಕೆಯಾಗಲಿದೆ. ಆದಕಾರಣ ಲೇಬಲ್‌ಗಳನ್ನು ಬಳಸಬಾರದು ಎಂದು ಜಿಲ್ಲಾಧಿಕಾರಿ ವಿ. ರಾಜಾರಾಮನ್ ಅವರು ತಮಿಳುನಾಡು ಪಟಾಕಿ ಉತ್ಪಾದನಾ ಸಂಘಟನೆಗೆ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಅಖಿಲ ಭಾರತ ಹಿಂದೂ ಮಹಾಸಭಾದ ರಾಜ್ಯ ಘಟಕದ ಮನವಿ ಮೇರೆಗೆ ಈ ಕ್ರಮ ಕೈಗೊಂಡಿರುವುದಾಗಿ ಜಿಲ್ಲಾಧಿಕಾರಿ ಸುತ್ತೋಲೆಯಲ್ಲಿ ಹೇಳಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಪಟಾಕಿಗಳ ಉತ್ಪಾದನಾ ಸಂಘಟನೆಯ ಅಧ್ಯಕ್ಷರು ಜಿಲ್ಲಾಡಳಿತದ ಸೂಚನೆಯನ್ನು ಪಟಾಕಿ ಕಾರ್ಖಾನೆಗಳು ಕಟ್ಟುನಿಟ್ಟಾಗಿ ಪಾಲಿಸಲಿವೆ. ಯಾವುದೇ ವ್ಯಕ್ತಿ ಅಥವಾ ಸಮುದಾಯದ ಭಾವನೆಗಳಿಗೆ ನೋವುಂಟು ಮಾಡುವುದಿಲ್ಲ ಎಂದು ಹೇಳಿದ್ದಾರೆ.**

---

## ಆಸ್ಟ್ರೇಲಿಯಾ ಮ್ಯೂಸಿಯಂನಲ್ಲಿದ್ದ ಬುದ್ಧ ಭಾರತಕ್ಕೆ



**ಜರ್ಮನ್ ಚಾನ್ಸಲರ್ ಏಂಜೆಲಾ ಮರ್ಕೆಲ್ ಅವರು ಪುರಾತನ ದುರ್ಗಾಮೂರ್ತಿಯನ್ನು ಭಾರತಕ್ಕೆ ಹಸ್ತಾಂತರಿಸಿದ ಬೆನ್ನಲ್ಲೇ, ಆಸ್ಟ್ರೇಲಿಯಾದ ಆರ್ಟ್ ಗ್ಯಾಲರಿಯೊಂದು 2000 ವರ್ಷ ಹಳೆಯದಾದ ಬುದ್ಧನ ಮೂರ್ತಿಯನ್ನು ಮರಳಿಸಲು ಒಪ್ಪಿಕೊಂಡಿದೆ. ಕುಳಿತ ಸ್ಥಿತಿಯಲ್ಲಿರುವ ಬುದ್ಧನ ಮೂರ್ತಿ ಉತ್ತರ ಪ್ರದೇಶದ ಮಥುರಾ ಮೂಲದ್ದಾಗಿರುವ ಸಾಧ್ಯತೆ ಇದೆ. ಸದ್ಯ ಅದನ್ನು ಆಸ್ಟ್ರೇಲಿಯಾದ ನ್ಯಾಷನಲ್ ಆರ್ಟ್ ಗ್ಯಾಲರಿಯಲ್ಲಿ ಇರಿಸಲಾಗಿದೆ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ತಿಳಿಸಿದೆ.**

---



ಭಾರತದ ವಿರೋಧದ ಹೊರತಾಗಿಯೂ 9764 ಕೋಟಿ ರೂ. ವೆಚ್ಚದಲ್ಲಿ ಟಿಬೆಟ್‌ನ ಬ್ರಹಪುತ್ರ ನದಿಗೆ ಕಟ್ಟಿದ ಅಣೆಕಟ್ಟಿನಿಂದ ಚೀನಾ ಅಧಿಕೃತವಾಗಿ ವಿದ್ಯುತ್ ಉತ್ಪಾದನೆ ಆರಂಭಿಸಿದೆ. ಇದರಿಂದ ಭಾರತದಲ್ಲಿ ಬ್ರಹ್ಮಪುತ್ರ ನದಿ ಹರಿವಿನ ಹಾದಿಯಲ್ಲಿನ ಉದ್ದೇಶಿತ ಯೋಜನೆಗಳಿಗೆ ನೀರಿನ ಕೊರತೆಯಾಗುವ ಆತಂಕ ಎದುರಾಗಿದೆ. ಚೀನಾದ ಅತಿ ದೊಡ್ಡ ಹೈಡ್ರೋಪವರ್ ಉತ್ಪಾದನಾ ಸಂಸ್ಥೆ ಗೆಝುಬಾ ಗ್ರೂಪ್ ಎಲ್ಲ 6 ಘಟಕಗಳಿಂದ ವಿದ್ಯುತ್ ಉತ್ಪಾದನೆಯನ್ನು ಆರಂಭಿಸಿದೆ ಎಂದು ಚೀನೀ ಸುದ್ದಿಸಂಸ್ಥೆ ಕ್ಸಿನುಹಾ ವರದಿ ಮಾಡಿದೆ. ಟಿಬೆಟ್ ಭಾಗದಲ್ಲಿ ಹರಿಯುವ ಬ್ರಹ್ಮಪುತ್ರ ನದಿಯ ನೀರನ್ನು ತಡೆದು ಜಾಂಗ್ಮೋ ಹೈಡ್ರೋ ಪವರ್‌ಸ್ಟೇಷನ್ ಆರಂಭಿಸಿದೆ. ನೀರು ಸಮೃದ್ಧವಾಗಿ ದೊರೆಯುವ ಜಾಗದಲ್ಲಿ ವಿದ್ಯುತ್ ಘಟಕವನ್ನು ನಿರ್ಮಿಸಿದ್ದು, ಇಲ್ಲಿ ಉತ್ಪಾದನೆಯಾಗುವ ವಿದ್ಯುತ್‌ನ್ನು ಟಿಬೆಟ್‌ನ ಮಧ್ಯಭಾಗಕ್ಕೆ ಪೂರೈಸಲಿದೆ. ಬ್ರಹ್ಮಪುತ್ರ ನದಿಯು ಟಿಬೆಟ್‌ನಲ್ಲಿ ಹುಟ್ಟಿ ಯಾರ್ಲುಂಗ್ ಝಾಂಗ್ಬೋ ಹೆಸರಿನಲ್ಲಿ ಹರಿದು ಭಾರತದ ಮೂಲಕ ಬಾಂಗ್ಲಾದೇಶಕ್ಕೆ ಹರಿಯುತ್ತದೆ. ಭಾರತದ ಜೀವನಾಡಿಯಂತಿರುವ ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ಜಾಂಗ್ಮೋ ಹೈಡ್ರೋ ಪವರ್‌ಸ್ಟೇಷನ್ ನಿರ್ಮಾಣಕ್ಕೆ ಭಾರತ ಮೊದಲಿನಿಂದಲೂ ವಿರೋಧಿಸುತ್ತಿದೆ. ಇದಕ್ಕೆ ಕ್ಯಾರೆ ಅನ್ನದ ಚೀನಾ, ಬ್ರಹ್ಮಪುತ್ರ ನದಿಗೆ ಮತ್ತಷ್ಟು ಅಣೆಕಟ್ಟುಗಳನ್ನು ನಿರ್ಮಿಸುವುದಾಗಿ ಪ್ರಕಟಿಸಿದೆ. ಇದರಿಂದ ಎರಡು ರಾಷ್ಟ್ರಗಳ ನಡುವೆ ಸಂಘರ್ಷ ಉಂಟಾಗುವ ಸಾಧ್ಯತೆಯಿದೆ. ಸಂಗ್ರಹಿಸಿಟ್ಟ ನೀರನ್ನು ಏಕಾಏಕಿ ಬಿಡುಗಡೆ ಮಾಡಿದರೆ ಭಾರತದಲ್ಲಿ ಮುಖ್ಯವಾಗಿ ಈಶಾನ್ಯ ಭಾರತದಲ್ಲಿ ಪ್ರವಾಹ ತಲೆದೋರುವ ಸಾಧ್ಯತೆಯಿದೆ ಎಂದು ಭಾರತ ಆತಂಕ ವ್ಯಕ್ತಪಡಿಸಿತ್ತು.

---



**ಗಗನಕ್ಕೇರಿರುವ ದ್ವಿದಳ ಧಾನ್ಯಗಳ ಬೆಲೆಯನ್ನು ನಿಯಂತ್ರಿಸುವ ಹಾಗೂ ಅಕ್ರಮ ದಾಸ್ತಾನನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹೆಜ್ಜೆಯಿಟ್ಟಿದೆ. ಪರವಾನಗಿ ಹೊಂದಿರುವ ಆಹಾರ ಸಂಸ್ಕರಣಾ ಘಟಕಗಳು, ಆಮದುದಾರರು, ರಫ್ತುದಾರರು ಮತ್ತು ಬಿಗ್‌ಬಜಾರ್‌ನಂತಹ ಬೃಹತ್ ರಿಟೇಲ್ ಮಳಿಗೆಗಳು ಹೊಂದಿರುವ ಧಾನ್ಯಗಳ ಮೇಲೆ ದಾಸ್ತಾನು ಮಿತಿ ಹೇರಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಜತೆಗೆ, ಅಕ್ರಮ ದಾಸ್ತಾನು, ಕಾಳಸಂತೆ ಮಾರಾಟದ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೂ ಸೂಚಿಸಿದೆ. ಕರ್ನಾಟಕ ಸೇರಿ 10 ರಾಜ್ಯಗಳ ವಿವಿಧೆಡೆ ದಾಳಿ ನಡೆಸಿದ ಅಧಿಕಾರಿಗಳು, ನಿಯಮ ಉಲ್ಲಂಘಿಸಿ ಸಂಗ್ರಹಿಸಲಾಗಿದ್ದ ಸುಮಾರು 35 ಸಾವಿರ ಟನ್ 6 ದ್ವಿದಳ ಧಾನ್ಯಗಳನ್ನು ವಶಕ್ಕೆ ಪಡೆದಿದ್ದಾರೆ. ದೇಶಾದ್ಯಂತ 3290 ಪ್ರದೇಶಗಳಲ್ಲಿ ದಾಳಿ ನಡೆದಿದ್ದು, ಅಕ್ರಮವಾಗಿ ಸಂಗ್ರಹಿಸಿದ್ದ 35,288 ಟನ್ ದ್ವಿದಳ ಧಾನ್ಯ ವಶಕ್ಕೆ ಪಡೆದಿದೆ. ಮಹಾರಾಷ್ಟ್ರದಲ್ಲಿ ಅತ್ಯಧಿಕ 23,340 ಟನ್, ಛತ್ತೀಸ್‌ಗಢದಲ್ಲಿ 4,525, ತೆಲಂಗಾಣದಲ್ಲಿ 2546, ಮಧ್ಯಪ್ರದೇಶದಲ್ಲಿ 2295, ಹರಿಯಾಣದಲ್ಲಿ 1168, ಕರ್ನಾಟಕದಲ್ಲಿ 68.47 ಟನ್ ದ್ವಿದಳ ಧಾನ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ.**

---



ಯುದ್ಧ ವಿಮಾನಗಳಲ್ಲಿ, ಉಗ್ರರ ವಿರುದ್ಧದ ಹೋರಾಟದಲ್ಲಿ ಮಹಿಳಾ ಯೋಧರಿಗೂ ಅವಕಾಶ ಕಲ್ಪಿಸುವ ನಿರ್ಧಾರವನ್ನು ಸೇನೆ ಘೋಷಿಸಿದ ಬೆನ್ನಲ್ಲೇ, ಈಗ ರಾಷ್ಟ್ರೀಯ ಭದ್ರತಾಪಡೆ (ಎನ್‌ಎಸ್‌ಜಿ) ಕೂಡ ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಿಟ್ಟಿದೆ. ಶೀಘ್ರದಲ್ಲೇ ವಿವಿಐಪಿ (ಅತಿ ಗಣ್ಯರು) ಭದ್ರತೆಗೂ ಮಹಿಳಾ ಕಮಾಂಡೋಗಳನ್ನು ನಿಯೋಜಿಸಲಾಗುವುದು ಎಂದು ಎನ್‌ಎಸ್‌ಜಿ ತಿಳಿಸಿದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-11-2015



# ಝಾರ್ಖಂಡ್ ತಲುಪಿದ ಕೆದಿಲಾಯರ ನೇತೃತ್ವದ ಭಾರತ ಪರಿಕ್ರಮ ಯಾತ್ರೆ



ಗ್ರಾಮ ವಿಕಾಸದ ಧ್ಯೇಯದೊಂದಿಗೆ ಕಾಲ್ನಡಿಗೆಯ ಮೂಲಕ ದೇಶಾದ್ಯಂತ ಸಂಚರಿಸುತ್ತಿರುವ ಆರೆಸ್ಸೆಸ್ ಮಾಜಿ ಅಖಿಲ ಭಾರತೀಯ ಸೇವಾ ಪ್ರಮುಖ್ ಸೀತಾರಾಮ ಕೆದಿಲಾಯ ಅವರ ನೇತೃತ್ವದ ಭಾರತ ಪರಿಕ್ರಮ ಯಾತ್ರೆ ಇದೀಗ ಝಾರ್ಖಂಡ್ ರಾಜ್ಯವನ್ನು ಪ್ರವೇಶಿಸಿದೆ. ಹಳ್ಳಿಯ ಜನಜೀವನ, ನೀರಿನ ಸಂರಕ್ಷಣೆ, ಪರಿಸರ ಹಾಗೂ ಗ್ರಾಮೀಣ ಭಾರತೀಯ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ 2012ರ ಆಗಸ್ಟ್ 9ರಂದು ಕನ್ಯಾಕುಮಾರಿಯಿಂದ ಆರಂಭಗೊಂಡ ಯಾತ್ರೆಯು ಕೇರಳ, ಕರ್ನಾಟಕ, ಮಹಾರಾಷ್ಟ್ರ, ಜಮ್ಮು–ಕಾಶ್ಮೀರ, ಈಶಾನ್ಯ ಭಾರತ ಸೇರಿದಂತೆ ಈಗಾಗಲೇ 19 ರಾಜ್ಯಗಳಲ್ಲಿ ಸಂಚರಿಸಿರುವ ಕೆದಿಲಾಯರು ಈ ಮೂಲಕ 1,165 ದಿನಗಳ ಪಾದಯಾತ್ರೆ ಮುಗಿದಿಸಿದ್ದಾರೆ.

ನವೆಂಬರ್ 30ರವರೆಗೆ ಝಾರ್ಖಂಡ್‌ನ ವಿವಿಧ ಗ್ರಾಮಗಳಿಗೆ ಭೇಟಿ ನೀಡಲಿರುವ ಕೆದಿಲಾಯರು ಡಿಸೆಂಬರ್ 1ರಂದು ಪಶ್ಚಿಮ ಬಂಗಾಳದ ಗಡಿ ಗ್ರಾಮಗಳಿಗೆ ಹೋಗಿ ಫೆಬ್ರವರಿಯಲ್ಲಿ ಒಡಿಶಾ ರಾಜ್ಯವನ್ನು ಪ್ರವೇಶಿಸಲಿದ್ದಾರೆ. ಪಶ್ಚಿಮ ಬಂಗಾಳವನ್ನು ಒಮ್ಮೆ ಬಿಹಾರದಿಂದ, ಇನ್ನೊಮ್ಮೆ ಅಸ್ಸಾಂನಿಂದ ಕೆದಿಲಾಯ ಪ್ರವೇಶಿಸಿದ್ದು ಈಗ ಮೂರನೆಯ ಬಾರಿ ಪ್ರವೇಶಿಸಲಿದ್ದಾರೆ. ಇದುವರೆಗೆ 1,500ಕ್ಕೂ ಹೆಚ್ಚು ಗ್ರಾಮಗಳನ್ನು 16,000 ಕಿ.ಮೀ. ದೂರವನ್ನು ಕಾಲ್ನಡಿಗೆಯಲ್ಲಿ ಪ್ರಯಾಣಿಸಿದ್ದಾರೆ. ಭೇಟಿ ನೀಡಿರುವ ಪ್ರತಿಗ್ರಾಮಗಳಲ್ಲಿಯೂ ನೆಲ, ಜಲ, ಗ್ರಾಮೀಣ ಬದುಕಿನ ಮೌಲ್ಯದ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ರಾಂಚಿಯಲ್ಲಿ ಅಕ್ಟೋಬರ್ 31ರಿಂದ ನವೆಂಬರ್ 1ರ ವರೆಗೆ ನಡೆಯುವ ಆರೆಸ್ಸೆಸ್ ಅಖಿಲ ಭಾರತೀಯ ಕಾರ್ಯಕಾರಿಣಿ ಮಂಡಳಿ ಸಭೆಯ ಸಂದರ್ಭದಲ್ಲಿ ಸರಸಂಘಚಾಲಕ, ಸರಕಾರ್ಯವಾಹ, ಸಹಸರಕಾರ್ಯವಾಹ ಮೊದಲಾದ ರಾಷ್ಟ್ರೀಯ ನಾಯಕರನ್ನು ಕೆದಿಲಾಯರು ಭೇಟಿ ಮಾಡಲಿದ್ದಾರೆ.



# ಸಾವಯವ ಕ್ಯೂಬಾ !

ಸಾವಯವ ಕೃಷಿಯಲ್ಲಿ ಪುಟ್ಟ ದೇಶ ಕ್ಯೂಬಾದ ಸಾಧನೆ ವಿಶ್ವದ ಗಮನ ಸೆಳೆದಿದೆ. 1990ರಲ್ಲಿ ರಷ್ಯಾ ಸಂಯುಕ್ತ ಸಂಸ್ಥಾನದ (ಯುಎಸ್‌ಎಸ್‌ಆರ್) ಅವಸಾನದೊಂದಿಗೆ ಆ ದೇಶ ಪಟ್ಟ ಪಡಿಪಾಟಲು ಅಷ್ಟಿಷ್ಟಲ್ಲ. ಯುಎಸ್‌ಎಸ್‌ಆರ್‌ನಿಂದ ಸಿಗುತ್ತಿದ್ದ ರಸಗೊಬ್ಬರ, ಕೀಟನಾಶಕ, ತೈಲ ಪೂರೈಕೆ ಹಠಾತ್ ಸ್ಥಗಿತವಾದಾಗ ಕ್ಯೂಬಾದಲ್ಲಿ ಆಹಾರದ ಕೊರತೆ ಎದುರಾಗಿತ್ತು. ಬೆಳೆ ಬೆಳೆಯಲು ರಸಗೊಬ್ಬರವಿಲ್ಲ, ಕೃಷಿ ಉತ್ಪಾದನೆ ಸಾಗಾಟಕ್ಕೆ ತೈಲದ ಕೊರತೆ. ಜನ ಹಸಿದೇ ಇರಬೇಕಾದ ಸ್ಥಿತಿ. ಇಂಥ ಪರಿಸ್ಥಿತಿಯನ್ನು ಸವಾಲಾಗಿ ಸ್ವೀಕರಿಸಿದ ಕ್ಯೂಬಾ ಸಾವಯವದತ್ತ ಹೊರಳಿತು. ಎರೆಹುಳು ಗೊಬ್ಬರ ತಯಾರಿಕೆ, ಸಮಗ್ರ ಕೀಟ ನಿರ್ವಹಣೆ ಪದ್ಧತಿ, ಬೆಳೆ ಬದಲಾವಣೆ, ಕಾಂಪೋಸ್ಟ್ ತಯಾರಿಕೆಗೆ ಆದ್ಯತೆ ನೀಡಲಾಯಿತು. ಇವೆಲ್ಲವುಗಳ ಪರಿಣಾಮ ಇಂದು ಆ ದೇಶ ಆಹಾರ ಉತ್ಪಾದನೆಯಲ್ಲಿ ಭಾಗಶಃ ಸ್ವಾವಲಂಬನೆ ಸಾಧಿಸಿದೆ. ಅದು ಸಾವಯವ ವಿಧಾನದಲ್ಲಿ ಎಂಬುದು ಮುಖ್ಯ. ನಾಗರಿಕತೆ ಬೆಳವಣಿಗೆ ಸಂದರ್ಭದ ಕೃಷಿ ಜ್ಞಾನ–ಪದ್ಧತಿ ಈಗಿಲ್ಲ. ರಾಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ಯಂತ್ರಗಳ ನೆರವಿಲ್ಲದೇ ಆಹಾರ ಉತ್ಪಾದನೆ ಸಾಧ್ಯವೇ ಇಲ್ಲ ಎಂಬಂತಹ ಸಂಕೀರ್ಣ ಪರಿಸ್ಥಿತಿ ನಿರ್ಮಾಣವಾಗಿರುವ ಇಂದು ಇಂತಹ ಉದಾಹರಣೆಗಳು ಬೆಳಕಾಗಿ ಗೋಚರಿಸುತ್ತವೆ.

# ಅಂಬೇಡ್ಕರ್ ಸ್ಥಳ ಪಂಚತೀರ್ಥವಾಗಿ ಅಭಿವೃದ್ಧಿ: ಮೋದಿ



ಸಂವಿಧಾನ ನಿರ್ಮಾತೃ ಡಾ। ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜೀವನದಲ್ಲಿ ಪ್ರಮುಖವಾಗಿದ್ದ 5 ಸ್ಥಳಗಳನ್ನು 'ಪಂಚತೀರ್ಥ' ಹೆಸರಿನಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಮುಂಬಯಿಯ ಇಂದು ಮಿಲ್ ಕಾಂಪೌಂಡ್‌ನಲ್ಲಿ ಅಂಬೇಡ್ಕರ್ ಸ್ಮಾರಕಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಪಂಚತೀರ್ಥ ಕಲ್ಪನೆಯಡಿಯಲ್ಲಿ ಅಂಬೇಡ್ಕರ್ ಜೀವನದಲ್ಲಿ ಪ್ರಮುಖವಾಗಿರುವ ಮಧ್ಯಪ್ರದೇಶದ ಒಂದು ಸ್ಥಳ, ದಿಲ್ಲಿಯ ಅಲಿಪುರ್ ನಿವಾಸ, ಮುಂಬಯಿಯ ಇಂದುಮಿಲ್ ಮೆಮೋರಿಯಲ್, ಮುಂಬಯಿ ನಿವಾಸ ಮತ್ತು ಇತ್ತೀಚೆಗೆ ಲಂಡನ್‌ನಲ್ಲಿ ಭಾರತ ಸರಕಾರ ಖರೀದಿಸಿರುವ ಅಂಬೇಡ್ಕರ್ ನೆಲೆಸಿದ್ದ ನಿವಾಸವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು. ಇದೇ ವೇಳೆ ಅಂಬೇಡ್ಕರ್ ಮಹತ್ಕಾರ್ಯಗಳನ್ನು ತಿಳಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ಶ್ರದ್ಧಾ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಹಾಗೂ ಜೊತೆಗೆ ದೇಶದ ಸಂವಿಧಾನ ಅಂಗೀಕಾರಗೊಂಡ ದಿನವಾದ ನ. 26ನ್ನು 'ಸಂವಿಧಾನ ದಿನ'ವನ್ನಾಗಿ ಆಚರಿಸುವುದಾಗಿ ಪ್ರಧಾನಿ ಘೋಷಿಸಿದ್ದಾರೆ. 1949 ನ. 26ರಂದು ಭಾರತದ ಸಂವಿಧಾನವನ್ನು ಅಂಗೀಕರಿಸಲಾಗಿತ್ತು.

# ದಲಿತರ ಕಾಲೊನಿಯಲ್ಲಿ ಪೇಜಾವರ ಶ್ರೀಗಳ ಪಾದಯಾತ್ರೆ



ತಮ್ಮ ಎಳೆಯ ವ'ಂ'ಎ'ಂಸ್ಸಿನಿಂದ'ಲೇ ಸಾಮಾಜಿಕ ಸಾಮರಸ್ಯ ಮೂಡಿಸುವ ಸಲುವಾಗಿ ನಿರಂತರ ವಿವಿಧ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ 84ರ ಹರೆಯದ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಗಳು ಇತ್ತೀಚೆಗೆ ದಾವಣಗೆರೆಯ ನಿಟುವಳ್ಳಿಯ ದಲಿತ ಕಾಲೋನಿಯಲ್ಲಿ ಪಾದಯಾತ್ರೆ ನಡೆಸಿದರು.

ನಿಟುವಳ್ಳಿಯ ದಲಿತರ ಕಾಲೊನಿಯಲ್ಲಿ ದಂಪತಿಯಿಂದ ಪಾದಪೂಜೆ ಸ್ವೀಕರಿಸಿದ ನಂತರ ಫಲಮಂತ್ರಾಕ್ಷತೆ ನೀಡಿ ಮಾತನಾಡಿದ ಪೂಜ್ಯ ಶ್ರೀಗಳು, ಸಮಾಜದಲ್ಲಿರುವ ಅಸ್ಪೃಶ್ಯತೆ, ಅಸಮಾನತೆಯನ್ನು ಹೋಗಲಾಡಿಸಲು, ಸಮಾನತೆಯನ್ನು ಕಾಣಲು ದಲಿತರ ಕಾಲೊನಿಗೆ ಪಾದಯಾತ್ರೆ ಕೈಗೊಂಡಿದ್ದೇನೆ. ಇಂದಿಗೂ ಹಿಂದೂ ಸಮಾಜದಲ್ಲಿ ಅಸಮಾನತೆ ತಾಂಡವವಾಡುತ್ತಿದೆ. ಯಾವುದೇ ಹಿಂದುಳಿದ ವರ್ಗದ, ತುಳಿತಕ್ಕೆ ಒಳಗಾದ ಸಮುದಾಯವನ್ನು ಕಡೆಗಣಿಸದೇ ಅವರನ್ನು ಸಮಾನತೆಯಿಂದ ಕಾಣಬೇಕು. ದಲಿತರನ್ನು ಅಪಮಾನಿಸಿದರೆ ಹಿಂದೂ ಸಮಾಜವನ್ನು ಅವಮಾನಿಸಿದಂತೆ. ಈ ವರ್ಗಗಳ ಏಳಿಗೆಗೆ ಸಂಪೂರ್ಣ ಹಿಂದೂ ಸಮಾಜ ಒಂದಾಗಿ ದುಡಿಯಬೇಕಾಗಿದೆ ಎಂದು ಅವರು ಹಿಂದೂ ಸಮಾಜಕ್ಕೆ ಕರೆ ನೀಡಿದರು.

# ಭಾರತದಲ್ಲಿರುವ ಜಾತ್ಯಾತೀತವಾದಿಗಳು ಹಿಂದೂ ವಿರೋಧಿಗಳು: ತಸ್ಲಿಮಾ ನಸ್ರೀನ್



ಭಾರತದಲ್ಲಿರುವ ಬಹುತೇಕ ಜಾತ್ಯಾತೀತವಾದಿಗಳು ಹಿಂದೂ ವಿರೋಧಿಗಳು ಎಂದು ಬಾಂಗ್ಲಾ ದೇಶದ ಲೇಖಕಿ ತಸ್ಲಿಮಾ ನಸ್ರೀನ್ ಹೇಳಿದ್ದಾರೆ. ಆಂಗ್ಲ ಪತ್ರಿಕೆಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಅವರು ದೇಶದಲ್ಲಿರುವ ಅನೇಕ ಬರಹಗಾರರು ದ್ವಂದ್ವ ನಿಲುವು ಹೊಂದಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಜಾತ್ಯಾತೀತವಾದಿಗಳು ಹಿಂದೂ ವಿರೋಧಿಗಳಾಗಿದ್ದು, ಮುಸ್ಲಿಂ ಪರವಾಗಿರುತ್ತಾರೆ. ಇವರು ಹಿಂದೂ ಮೂಲಭೂತವಾದಿಗಳನ್ನು ವಿರೋಧಿಸುತ್ತಾರೆ, ಹಾಗೆ ಮುಸಲ್ಮಾನರ ಘೋರ ಆಚರಣೆಗಳ ಬಗ್ಗೆ ಯಾವುದೇ ಚಕಾರವೆತ್ತುವುದಿಲ್ಲ ಎಂದ ಅವರು, ತಮ್ಮ ಲಜ್ಜಾ ಪುಸ್ತಕಕ್ಕೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ನಿಷೇಧ ಹೇರಿದರು. ಈ ವೇಳೆ ಜಾತ್ಯಾತೀತವಾದಿಗಳು ಎಂದುಕೊಳ್ಳುವ ಲೇಖಕರು ಯಾವುದೇ ಆಕ್ರೋಶ ವ್ಯಕ್ತಪಡಿಸದೇ ಮೌನವಾಗಿದ್ದರು ಎಂದು ಹೇಳಿದ್ದಾರೆ.

# ಹಿಂದೂ ಧರ್ಮಕ್ಕೆ 300 ಕ್ರೈಸ್ತರ 'ಘರ್ ವಾಪಸಿ'

ವಾರಾಣಸಿಯ ಔಸಾನ್‌ಪುರ ಗ್ರಾಮದಲ್ಲಿ ನಡೆದ ಕಾರ್ಯಕ್ರಮದ ಮೂಲಕ ಸುಮಾರು 300 ಮಂದಿ ಕ್ರಿಶ್ಚಿಯನ್ ಮತದಿಂದ ಮರಳಿ ಮಾತೃಧರ್ಮಕ್ಕೆ ಆಗಮಿಸಿದ್ದಾರೆ. ಕೆಲವು ವರ್ಷಗಳ ಹಿಂದಷ್ಟೇ ಗ್ರಾಮದಲ್ಲಿ ಸ್ಥಾಪನೆಗೊಂಡಿದ್ದ ಚರ್ಚ್‌ವೊಂದು ಗ್ರಾಮದ ಹಿಂದೂಗಳನ್ನು ತಮ್ಮ ಧರ್ಮಕ್ಕೆ ಮತಾಂತರಿಸಿತ್ತು. ಇದೀಗ ಧರ್ಮ ಜಾಗರಣ್ ಸಮನ್ವಯ್ ಸಮಿತಿ ಇವರನ್ನು ಮತ್ತೆ ಹಿಂದೂ ಧರ್ಮಕ್ಕೆ ವಾಪಸ್ ಕರೆ ತಂದಿದೆ.

ಕಾರ್ಯಕ್ರಮದಲ್ಲಿ ಮರಳಿ ಮಾತೃಧರ್ಮಕ್ಕೆ ಆಗಮಿಸಿದವರನ್ನೆಲ್ಲಾ ಶುದ್ಧೀಕರಣ ಮಾಡಿ ಅವರಿಗೆ ಭಗವದ್ಗೀತೆ ಮತ್ತು ಹನುಮಾನ್ ಚಾಲೀಸಾ ಪುಸ್ತಕ ನೀಡಿ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

# ಗೋಮಾಂಸ ರಫ್ತು ತಡೆಗೆ ಎಲ್ಲ ಬಂದರುಗಳಲ್ಲಿ ಲ್ಯಾಬ್



ಗೋಮಾಂಸ ವಿವಾದ ದೇಶಾದ್ಯಂತ ಭಾರೀ ವಿವಾದ ಸೃಷ್ಟಿಸಿರುವ ಹೊತ್ತಿನಲ್ಲೇ, ಅಕ್ರಮ ಗೋಮಾಂಸ ರಫ್ತಿನ ಮೇಲೆ ಕಣ್ಗಾವಲು ಇಡಲು ಕೇಂದ್ರ ಸರಕಾರ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಎಲ್ಲ ಬಂದರುಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ಸರಕಾರ ತಿಳಿಸಿದೆ. ಗೋಮಾಂಸ ಅಕ್ರಮ ರಫ್ತಿಗೆ ಸಂಬಂಧಿಸಿದ ಪರಿಶೀಲನಾ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕೃಷಿ ಖಾತೆ ರಾಜ್ಯ ಸಚಿವ ಸಂಜೀವ್ ಕುಮಾರ್ ಬಲ್ಯಾನ್, ಪ್ರಸ್ತುತ ದೇಶದಿಂದ ಗೋಮಾಂಸ ರಫ್ತಿಗೆ ನಿಷೇಧ ಇದೆ. ಇದರ ಹೊರತಾಗಿಯೂ ಅಕ್ರಮವಾಗಿ ಯಾರಾದರೂ ಈ ಕೃತ್ಯದಲ್ಲಿ ತೊಡಗಿಸಿಕೊಂಡಿದ್ದಲ್ಲಿ ಅದನ್ನು ಪತ್ತೆಹಚ್ಚುವ ನಿಟ್ಟಿನಲ್ಲಿ ಎಲ್ಲ ಬಂದರುಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುವುದು ಎಂದರು. ಸದ್ಯ ಭಾರತದಲ್ಲಿ ಗೋಮಾಂಸಗಳ ಮಾರಾಟಕ್ಕೆ ನಿಷೇಧವಿದ್ದರೂ, ಉಳಿದ ಪ್ರಾಣಿಗಳ ಮಾಂಸಗಳ ರಫ್ತಿಗೆ ಅವಕಾಶವಿದೆ. ದೇಶದಿಂದ ಪ್ರತಿ ವರ್ಷ 33,128 ಕೋಟಿ ರೂ.ನಷ್ಟು ಮೌಲ್ಯದ ಪ್ರಾಣಿಗಳ ಮಾಂಸ ವಿದೇಶಕ್ಕೆ ರಫ್ತಾಗುತ್ತಿದೆ.



**ದೇಶದಲ್ಲಿ ಗೋಹತ್ಯೆ ನಿಷೇಧಿಸುವ ಸಂಬಂಧ ಕೇಂದ್ರ ಸರ್ಕಾರ ಕಠಿಣ ಕ್ರಮಕೈಗೊಳ್ಳಬೇಕು ಎಂದು ಯೋಗಗುರು ಬಾಬಾ ರಾಮ್‌ದೇವ್ ಸಲಹೆ ನೀಡಿದ್ದಾರೆ. ಗೋವನ್ನು ಕೊಲ್ಲುವುದು ಮತ್ತು ಗೋವಿಗಾಗಿ ಜನರನ್ನು ಕೊಲ್ಲುವುದು – ಎರಡೂ ಕೂಡ ಅಪರಾಧ. ಎರಡೂ ಬಗೆಯ ಹಿಂಸೆ ದೇಶದಲ್ಲಿ ಕೊನೆಯಾಗಬೇಕು ಎಂದು ರಾಮ್‌ದೇವ್ ಹೇಳಿದ್ದಾರೆ. ಉತ್ತರ ಪ್ರದೇಶದಂತಹ ಅತ್ಯಂತ ಸೂಕ್ಷ್ಮ ಪ್ರದೇಶಗಳಲ್ಲಿ ಗೋಹತ್ಯೆ ನಿಷೇಧವಾಗಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಗೋಹತ್ಯೆ ನಿಷೇಧ ಮಾಡುವಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 97312 64009